ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ,** ಸಾರ್ವಜನಿಕ ಶಿಕ್ಷಣ ಇಲಾಖೆ, **ಹೊಸ ಸಾರ್ವಜನಿಕ ಕಟ್ಟಡಗಳು, ನೃಪತುಂಗ ರಸ್ತೆ,ಬೆಂಗಳೂರು**

ಸಂಖ್ಯೆ ದೈಶಿ:.ಅ.ಸಭೆ:30/2018-19 ದಿನಾಂಕ:30.06.2018

ವಿಷಯ: ದಿನಾಂಕ: 27.06.2018 ರಂದು ನಡೆದ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳ ಸಭೆಯ ನಡಾವಳಿಗಳು.

* * *

2018-19ನೇ ಸಾಲಿನ ಕ್ರೀಡಾಸ್ಪರ್ಧೆಗಳ ಸಂಘಟನೆ ಮತ್ತು ಇತರೆ ವಿಷಯಗಳ ಬಗ್ಗೆ ದಿನಾಂಕ: 27.06.2018 ರಂದು ಮಾನ್ಯ ನಿರ್ದೇಶಕರು[ಪ್ರೌಢ ಶಿಕ್ಷಣ], ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಬಾಗಲಕೋಟೆ ಜಿಲ್ಲೆಯ ಕೂಡಲ ಸಂಗಮದಲ್ಲಿ ಸಭೆ ನಡೆಸಲಾಯಿತು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು**

ಶ್ರೀ/ಶ್ರೀಮತಿ

| | | | |
|---|---|---|---|
| 1 | ಫಿಲೋಮಿನಾ ಲೋಬೊ | ನಿರ್ದೇಶಕರು[ಪ್ರೌಢಶಿಕ್ಷಣ],ಆಯುಕ್ತರ ಕಛೇರಿ, ಬೆಂಗಳೂರು | 22212873 |
| 2 | ಪ್ರೇಮ ಹೆಚ್.ಎಂ | ಸಹ ನಿರ್ದೇಶಕರು[ದೈಹಿಕ ಶಿಕ್ಷಣ], ಆಯುಕ್ತರ ಕಛೇರಿ, ಬೆಂ. | 22291847 |
| 3 | ನರಸಪ್ಪ ಎಂ.ಎನ್. | ವಿಭಾಗಿಯ ಉಪ ನಿರ್ದೇಶಕರು ಬೆಂ ವಿಭಾಗ [ದೈ.ಶಿ], ಆಯುಕ್ತರ ಕಛೇರಿ, | 22291847 |
| 4 | ಶೇಖರಪ್ಪ ಆರ್ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಬೆಂಗಳೂರು ಉತ್ತರ. | 9448324863 |
| 5 | ಶಿವಣ್ಣ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಬೆಂಗಳೂರು ದಕ್ಷಿಣ | 9986681965 |
| 6 | ಮಲ್ಲಪ್ಪ ಎಸ್ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಬೆಂಗಳೂರು ಗ್ರಾ ಜಿಲ್ಲೆ | 9632292350 |
| 7 | ನಾಗರಜು ಎಲ್. | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ರಾಮನಗರ ಜಿಲ್ಲೆ | 9880617433 |
| 8 | ಹನುಮಂತರೆಡ್ಡಿ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ | 9740174200 |
| 9 | ಮಂಜುನಾಥ ಎಂ. | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಕೋಲಾರ ಜಿಲ್ಲೆ | 9483464559 |
| 10 | ಗುರುಸಂಗಪ್ಪ ಹಡಗಲಿ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ತುಮಕೂರು ಜಿಲ್ಲೆ | 9886931123 |
| 11 | ರಾಜಕುಮಾರ್ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಮಧುಗಿರಿ ಜಿಲ್ಲೆ | 7259446539 |
| 12 | ಶಣ್ಮುಗಪ್ಪ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಚಿತ್ರದುರ್ಗ ಜಿಲ್ಲೆ | 7975957405 |
| 13 | ಕೊಟ್ರೇಶ್ ಪಿ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ದಾವಣಗೆರೆ ಜಿಲ್ಲೆ | 9449061371 |
| 14 | ರಮೇಶ್ ಎಸ್ ಎಸ್ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಶಿವಮೊಗ್ಗ ಜಿಲ್ಲೆ | 9611237631 |
| 15 | ಮರಿಯಪ್ಪ ಸಿ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಮೈಸೂರು ಜಿಲ್ಲೆ | 9686872401 |
| 16 | ಜಾರ್ಜ್ ಫಿಲಿಪ್ಸ್ ಜೆ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಚಾಮರಾಜನಗರ ಜಿಲ್ಲೆ | 9740123899 |
| 17 | ಪರಮೇಶ್ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಮಂಡ್ಯ ಜಿಲ್ಲೆ | 9844769289 |
| 18 | ವೆಂಕಟೇಶ ಮೂರ್ತಿ ಹೆಚ್ ಟಿ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಹಾಸನ ಜಿಲ್ಲೆ | 8453088477 |
| 19 | ಮಲ್ಲಪ್ಪ ಎಂ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ | 9448964477 |
| 20 | ರಘುನಾಥ್ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ | 9611532439 |
| 21 | ಶ್ರೀನಿವಾಸ್ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಕೊಡಗು ಜಿಲ್ಲೆ | 9448504636 |
| 22 | ಮಧುಕರ್ ಎಸ್ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಉಡುಪಿ ಜಿಲ್ಲೆ | 9972466652 |
| 23 | ಕಟ್ಟಿಮನಿ ಎಸ್ ಸಿ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಬೆಳಗಾವಿ ಜಿಲ್ಲೆ | 9448437286 |
| 24 | ಹನುಮೇಶಪ್ಪ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಚಿಕ್ಕೋಡಿ ಜಿಲ್ಲೆ | 9844457451 |
| 25 | ಸಂಗಣ್ಣವರ್ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಧಾರವಾಡ ಜಿಲ್ಲೆ | 7259154654 |
| 26 | ಅಶೋಕ್ ಎಂ ಕುಂಟೋಜಿ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಗದಗ ಜಿಲ್ಲೆ | 9480555779 |
| 27 | ರಾವಳ ಬಿ ಹೆಚ್ ಎನ್ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಹಾವೇರಿ ಜಿಲ್ಲೆ | 9986630697 |
| 28 | ಬಿರಾದ್ದರ್ ಎ.ಎಂ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ವಿಜಯಪುರ ಜಿಲ್ಲೆ | 9448891141 |
| 29 | ತಲಬಕ್ಕನವರ್ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಬಾಗಲಕೋಟೆ ಜಿಲ್ಲೆ | 9945805241 |
| 30 | ನಾಯಕ ಆರ್ ಹೆಚ್ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಉತ್ತರಕನ್ನಡ ಜಿಲ್ಲೆ | 9449359613 |
| 31 | ವಸಂತ ಪಿ ಭಂಡಾರಿ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಸಿರ್ಸಿ ಜಿಲ್ಲೆ | 9449060634 |
| 32 | ರವೀಂದ್ರಕುಮಾರ್ ಡಿ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಗುಲ್ಬರ್ಗಾ ಜಿಲ್ಲೆ | 9448902641 |

| | | | |
|---|---|---|---|
| 33 | ಶಿನ್ನೂರ್ ಸಿ ಬಿ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಯಾದಗಿರಿ ಜಿಲ್ಲೆ | 9916334789 |
| 34 | ಶಾವಂತಿ ಅರ್ಜುನ್ ರಾವ್ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ರಾಯಚೂರು ಜಿಲ್ಲೆ | 9742159985 |
| 35 | ಕಾಶೀನಾಥ್ ಪಾಟೀಲ್ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಬೀದರ್ ಜಿಲ್ಲೆ | 9880341828 |
| 36 | ಖಾದರ್ ರಹಮತುಲ್ಲಾ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಬಳ್ಳಾರಿ ಜಿಲ್ಲೆ | 9449790889 |
| 37 | ಸುದರ್ಶನ್ ರಾವ್ ವೈ | ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಕೊಪ್ಪಳ ಜಿಲ್ಲೆ | 9482404848 |

ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಮತ್ತು ಎಲ್ಲಾ ಜಿಲ್ಲಾ ದೈಹಿಕಶಿಕ್ಷಣ ಅಧಿಕಾರಿಗಳ ಹಾಗೂ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘಗಳ ಪದಾಧಿಕಾರಿಗಳ ಪರಿಚಯದೊಂದಿಗೆ ಸಭೆಯು ಪ್ರಾರಂಭವಾಯಿತು. ಪ್ರಾರಂಭದಲ್ಲಿ 2017-18ನೇ ಸಾಲಿನ ಕ್ರೀಡಾ ಪ್ರಗತಿಯ ಬಗ್ಗೆ ಪರಿಶೀಲಿಸಲಾಯಿತು.

**ಸಭೆಯಲ್ಲಿ ಚರ್ಚಿಸಿದ ವಿಷಯಗಳು:-**

1. **2016-17, 2017-18ನೇ ಸಾಲುಗಳಿಗೆ ಸಂಬಂಧಿಸಿದ ವಿದ್ಯಾರ್ಥಿ ಕ್ರೀಡಾ ನಿಧಿ ಬಾಕಿಯ ಬಗ್ಗೆ.**

ತೀರ್ಮಾನ: 2016-17, 2017-18ನೇ ಸಾಲುಗಳಿಗೆ ಸಂಬಂಧಿಸಿ, ಗದಗ, ಕೋಲಾರ, ಯಾದಗಿರಿ, ಮಧುಗಿರ, ಶಿರ್ಶಿ ಮತ್ತು ಕಾರವಾರ ಈ ಜಿಲ್ಲೆಗಳು ರಾಜ್ಯ ವಿದ್ಯಾರ್ಥಿ ಕ್ರೀಡಾ ನಿಧಿಗೆ ಸಲ್ಲಿಸಬೇಕಾದ ವಂತಿಗೆಯನ್ನು ಮಕ್ಕಳ ಸಂಖ್ಯೆಗನುಗುಣವಾಗಿ ಸಂಪೂರ್ಣವಾಗಿ ಭರಿಸದೆ ಉಳಿಸಿಕೊಂಡಿದ್ದು, ಬಾಕಿ ಹಣವನ್ನು ತುಂಬದೆ ಇರಲು ಕಾರಣಗಳೇನು?

ರಾಜ್ಯ ಮುಂದುವರೆದ ಯೋಜನಾ ಅಡಿಯಲ್ಲಿ ಕ್ರೀಡಾ ಕೂಟಗಳ ಸಂಘಟನೆಗಾಗಿ ಮತ್ತು ಕ್ರೀಡಾ ಉಡುಪು ಖರೀದಿಗಾಗಿ, ಅನುದಾನ ಬಿಡುಗಡೆ ಮಾಡುತ್ತಿದ್ದು, ಜಿಲ್ಲೆಯಲ್ಲಿ ವಸೂಲಾದ ವಿದ್ಯಾರ್ಥಿ ಕ್ರೀಡಾ ನಿಧಿಯಿಂದ ಇಲಾಖೆಯ ಆದೇಶದಂತೆ ರಾಜ್ಯ ವಂತಿಗೆ ಭರಿಸಲು ಕೊರತೆಯಾಗುವುದಿಲ್ಲ ಸಕಾಲಕ್ಕೆ ಸಂಪೂರ್ಣ ಹಣವನ್ನು ತುಂಬಬೇಕಾದ ಜವಾಬ್ದಾರಿ ಆಯಾ ಜಿಲ್ಲೆಯ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳದ್ದು. ಇನ್ನೂ ಮುಂದೆ ಬಾಕಿ ಉಳಿದಿರುವ ಹಣವನ್ನು ತುರ್ತಾಗಿ ರಾಜ್ಯ ವಿದ್ಯಾರ್ಥಿ ಕ್ರೀಡಾ ನಿಧಿ ಖಾತೆಗೆ ತುಂಬುವಂತೆ ಮಾನ್ಯ ನಿರ್ದೇಶಕರು (ಪ್ರೌಢ ಶಿಕ್ಷಣ) ಸೂಚಿಸಿದನ್ನು ಸಭೆಯಲ್ಲಿ ಸಂಮ್ಮತಿಸಿ ತೀರ್ಮಾನಿಸಲಾಯಿತ್ತು.

2. **2018-19ನೇ ಸಾಲಿಗೆ ಕ್ರೀಡಾಕೂಟಗಳ ಸಂಘಟನೆಯ ತಾತ್ಕಾಲಿಕ ಕ್ರೀಡಾ ಕ್ಯಾಲೆಂಡರ್ ಬಗ್ಗೆ.**

ಪ್ರತಿ ವರ್ಷದಂತೆ ಈ ವರ್ಷವು ಈ ಕೆಳಕಂಡಂತೆ ಕ್ರೀಡಾ ಕೂಟಗಳ ಸಂಘಟನೆ ಕುರಿತು, ತಾತ್ಕಾಲಿಕ ಕ್ರೀಡಾ ಕ್ಯಾಲೆಂಡರನ್ನು ರಚಿಸಲಾಗಿದ್ದು, ಇದರಂತೆ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು ಜಿಲ್ಲಾ ಹಂತದಲ್ಲಿ ಕ್ರಮ ಕೈಗೊಳ್ಳಲು ಸಭೆಯಲ್ಲಿ ತೀರ್ಮಾನಿಸಿ ಸೂಚಿಸಿತ್ತು.

| ಕ್ರ. ಸಂಖ್ಯೆ | ಸಂಘಟನೆಯ ಹಂತಗಳು | ಸಂಘಟನೆಯ ತಾತ್ಕಾಲಿಕ ಅವಧಿ |
|---|---|---|
| 1. | ಶಾಲಾ ಹಂತ ಆಯ್ಕೆ ಪ್ರಕ್ರಿಯೆ | ಜೂನ್ ಕೊನೆವಾರ |
| 2. | ವಲಯ ಹಂತ | ಜುಲೈ 01ರಿಂದ 15ರೊಳಗೆ |
| 3. | ತಾಲ್ಲೂಕ ಹಂತ | ಜುಲೈ 15ರಿಂದ 31ರೊಳಗೆ |
| 4. | ಜಿಲ್ಲಾ ಹಂತ | ಆಗಸ್ಟ್ 21 ರಿಂದ 31ರೊಳಗೆ |
| 5. | ವಿಭಾಗ ಹಂತ | ಸೆಪ್ಟಂಬರ್ 25 ರಿಂದ ಆಕ್ಟೋಬರ 15ರೊಳಗೆ |
| 6 | ರಾಜ್ಯ ಹಂತ | ಆಕ್ಟೋಬರ್ 25 ರಿಂದ ನವೆಂಬರ್ 15ರೊಳಗೆ |

3. **2018-19ನೇ ಸಾಲಿನ ವಿದ್ಯಾರ್ಥಿ ಕ್ರೀಡಾನಿಧಿ ವಂತಿಕೆಯನ್ನು ಸಂಗ್ರಹಿಸುವ, .ಅಯವ್ಯಯ ಸಿದ್ದಪಡಿಸಿ ಅನುಮೋದನೆ ಸಲ್ಲಿಸುವ ಬಗ್ಗೆ**

2018-19ನೇ ಸಾಲಿನಲ್ಲಿ ರಾಜ್ಯ ಪಠ್ಯಕ್ರಮದಡಿಯಲ್ಲಿನ ಸರ್ಕಾರಿ/ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ **6ನೇ ತರಗತಿಯಿಂದ 10ನೇ ತರಗತಿಯವರೆಗೆ [5ನೇ ತರಗತಿ ಮಕ್ಕಳಿಂದ ಯಾವುದೇ ಕಾರಣಕ್ಕೂ ಕ್ರೀಡಾನಿಧಿಯನ್ನು ಸಂಗ್ರಹಿಸಬಾರದು]** ದಾಖಲಾಗಿರುವ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ವಿದ್ಯಾರ್ಥಿ ಕ್ರೀಡಾ ನಿಧಿಯನ್ನು 06 ಮತ್ತು 07ನೇ ತರಗತಿ ವಿದ್ಯಾರ್ಥಿಗಳಿಂದ ರೂ:5 ರಂತೆ ಮತ್ತು ಉನ್ನತೀಕರಿಸಿದ 08ನೇ ತರಗತಿಯ ವಿದ್ಯಾರ್ಥಿಗಳಿಂದ ಹಾಗೂ ಪ್ರೌಢ ಶಾಲೆಗಳಲ್ಲಿಯ 08, 09 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಂದ ರೂ 15ರಂತೆ ತಾಲ್ಲೂಕ ದೈಹಿಕ ಶಿಕ್ಷಣ ಪರಿವೀಕ್ಷಕರು ಸಂಗ್ರಹಿಸಿದ ಹಣವು ಜಿಲ್ಲಾ ವಿದ್ಯಾರ್ಥಿ ಕ್ರೀಡಾ ನಿಧಿಯ ಜಂಟಿ ಖಾತೆಗೆ ದಿನಾಂಕ: ಜುಲೈ 31 ರೊಳಗೆ ಕಡ್ಡಾಯವಾಗಿ ಭರಿಸುವುದು. ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು, ತಾಲ್ಲೂಕು ದೈಹಿಕ ಶಿಕ್ಷಣ

ಪರಿವೀಕ್ಷಕರು ಬರಿಸಿದ ವಿದ್ಯಾರ್ಥಿ ಕ್ರೀಡಾ ನಿಧಿ ಹಣವು ತಾಲ್ಲೂಕಿನಲ್ಲಿಯ ಶಾಲೆಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗನುಗಣವಾಗಿ ಇರುವ ಬಗ್ಗೆ ಪರಿಶೀಲಿಸಿ, ಜಿಲ್ಲೆಯಲ್ಲಿ ಸಂಗ್ರಹವಾಗುವ ವಿದ್ಯಾರ್ಥಿ ಕ್ರೀಡಾ ನಿಧಿಯಿಂದ ರಾಜ್ಯ ವಿದ್ಯಾರ್ಥಿ ಕ್ರೀಡಾ ನಿಧಿ ಜಂಟಿ ಖಾತೆಗೆ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳ ಸಂಖ್ಯೆಗನುಗಣವಾಗಿ ಪ್ರತಿ ವಿದ್ಯಾರ್ಥಿಗೆ ರೂ 2ರಂತೆ ಹಾಗೂ ಪ್ರೌಢ ಶಾಲಾ ವಿದ್ಯಾರ್ಥಿಗಳ ಸಂಖ್ಯೆಗನುಗಣವಾಗಿ ಪ್ರತಿ ವಿದ್ಯಾರ್ಥಿಗೆ ರೂ 5ರಂತೆ ತುಂಬ ಬೇಕಾದ ವಂತಿಗೆ ಹಣವನ್ನು ಮೀಸಲಿರಿಸಿ, ಉಳಿದ ಹಣವನ್ನು ವಿಭಾಗ ಮತ್ತು ರಾಜ್ಯ ಮಟ್ಟಕ್ಕೆ ಭಾಗವಹಿಸುವ ವಿದ್ಯಾರ್ಥಿಗಳಿಗೆ ಟಿ.ಎ ಮತ್ತು ಡಿ.ಎ ಗಾಗಿ ಹಾಗೂ ತಾಲ್ಲೂಕು ಮತ್ತು ಜಿಲ್ಲಾ ಕಛೇರಿಗಳ ದೈಹಿಕ ಶಿಕ್ಷಣ ವಿಭಾಗದ ಸಾದಿಲ್‌ವಾರ್‌ಗಾಗಿ, ಜಿಲ್ಲಾ ಹಂತದಲ್ಲಿ ಸಭೆಗಳಿಗೆ ಖರ್ಚು ಮಾಡಲು ಆಯವ್ಯಯ ತಯಾರಿಸಿ ನಿಗಧಿತ ನಮೂನೆಯಲ್ಲಿ ಮಾನ್ಯ ನಿರ್ದೇಶಕರ ಅನುಮೋದನೆಗಾಗಿ ದಿನಾಂಕ: ಜುಲೈ 31ರೊಳಗೆ ಕಡ್ಡಾಯವಾಗಿ ಸಲ್ಲಿಸಿ ಅನುಮೋದನೆ ಪಡೆಯುವುದು. ಅನುಮೋದನೆ ಪಡೆಯದೆ, ಯಾವ ಬಾಬ್ತುಗಳಿಗೆ ಹಣವನ್ನು ವೆಚ್ಚ ಮಾಡಬಾರದೆಂದು ಈ ಕೆಳಗಿನ ಷರತುಗಳಂತೆ ಅಯವ್ಯಯ ತಯಾರಿಸಿ ಅನುಮೋದನೆಗೆ ಸಲ್ಲಿಸಲು ಸಭೆಯು ತೀರ್ಮಾನಿಸಿತ್ತು. ರಾಜ್ಯ ವಿದ್ಯಾರ್ಥಿ ಕ್ರೀಡಾ ನಿಧಿಗೆ ತುಂಬ ಬೇಕಾದ ಹಣವನ್ನು **ದಿನಾಂಕ: 15.08.2018ರೊಳಗೆ . ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಂ.ಎಸ್. ಬಿಲ್ಡಿಂಗ್ ಶಾಖೆ, ಬೆಂಗಳೂರು ಖಾತೆ ಸಂಖ್ಯೆ: 54034600735 ಐಎಫ್ ಎಸ್ ಸಿ ಕೋಡ್: ಎಸ್‌ಬಿಐ ಎಂವೈ:0040526] ಈ ಖಾತೆಗೆ ಆರ್.ಟಿ.ಜಿ.ಎಸ್ ಅಥವ ನೆಫ್ಟ್ ಮೂಲಕ ತುಂಬುವುದು.**

**ಅಯವ್ಯಯ ವಿಶೇಷ ಸೂಚನೆ:**

- ಜಿಲ್ಲಾ ವಿದ್ಯಾರ್ಥಿ ಕ್ರೀಡಾ ನಿಧಿ ಖಾತೆಯಲ್ಲಿ ಸಂಚಿತನಿಧಿ ಬಾಕಿ ಉಳಿಕೆ ನಮೂದಿಸಿರಬೇಕು.ಆದರೆ ಹಂಚಿಕೆ ಮಾಡುವಂತಿಲ್ಲ.
- ಪ್ರಸ್ತುತ ವರ್ಷದಲ್ಲಿ ಪ್ರಾಥಮಿಕ/ಪ್ರೌಢ ಶಾಲೆಗಳಲ್ಲಿ ದಾಖಲಾದ ಮಕ್ಕಳ ಸಂಖ್ಯೆಗನುಗುಣವಾಗಿ ಆಯವ್ಯಯ ಪ್ರಸ್ತಾವನೆ ತಯಾರಿಸುವುದು.
- ಪ್ರಸ್ತುತ ವರ್ಷದಲ್ಲಿ ರಾಜ್ಯ ವಂತಿಕೆಯನ್ನು ಎಷ್ಟು ಸಲ್ಲಿಸಬೇಕು ಎಂಬುದರ ಬಗ್ಗೆ ಮೀಸಲಿರಿಸುವುದು.
- ವಿಕಲಚೇತನ ಮಕ್ಕಳ ಕ್ರೀಡೆಗಳಿಗೆ ಸಂಬಂಧಿಸಿದಂತೆ 2011–12ನೇ ಸಾಲಿನಲ್ಲಿ ತಿಳಿಸಿರುವಂತೆ ನಿಯಮಗಳನ್ನು ಪಾಲಿಸುವುದು.
- ತಾಲ್ಲೂಕು ಮತ್ತು ಜಿಲ್ಲಾ ಹಂತದ ಕಛೇರಿ ಸಾದಿಲ್ವಾರುಗಳಿಗೆ ಜಿಲ್ಲಾ ವಿದ್ಯಾರ್ಥಿ ಕ್ರೀಡಾನಿಧಿಯಿಂದ ಹಣವನ್ನು ಹಂಚಿಕೆ ಮಾಡಿಕೊಳ್ಳುವುದು.
- ಯಾವುದೇ ಕಾರಣಕ್ಕೂ ಆಯವ್ಯಯವನ್ನು ತಯಾರಿಸುವಾಗ ಪ್ರಸ್ತುತ ವರ್ಷದಲ್ಲಿ ಸಂಗ್ರಹವಾಗುವ ಮೊತ್ತಕ್ಕೂ ಖರ್ಚು ಭರಿಸುವ ಮೊತ್ತಕ್ಕೂ ಹೆಚ್ಚುವರಿ ವ್ಯತ್ಯಾಸವಾಗದಂತೆ ಸರಿದೂಗಿಸುವುದು.
- ಜಿಲ್ಲಾ ವಿದ್ಯಾರ್ಥಿ ಕ್ರೀಡಾನಿಧಿ ಖಾತೆಗಳಲ್ಲಿನ ಸಂಚಿತ ನಿಧಿಯಿಂದ ಖರ್ಚು ಭರಿಸುವಂತಿಲ್ಲ ಕ್ರೀಡಾಚಟುವಟಿಕೆಗಳಿಗೆ ಸಂಬಂಧಿಸಿದಂತೆ ಅಗತ್ಯವಿದ್ದಲ್ಲಿ ನಿರ್ದೇಶಕರು[ಪ್ರೌಢ ಶಿಕ್ಷಣ]ಇವರ ಅನುಮತಿ ಪಡೆದು ಖರ್ಚು ಭರಿಸತಕ್ಕದ್ದು.

ಬ್ಯಾಂಕ್ ಕಲೆಕ್ಷನ್ ಚಾರ್ಜ ಕಟ್ಟಾವಣೆ ಮಾಡಲಾಗುತ್ತಿದ್ದು, ವಿನಿಮಯ ಶುಲ್ಕದ ಬಗ್ಗೆ ಬ್ಯಾಂಕ ವ್ಯವಸ್ಥಾಪಕರನ್ನು ಸಂಪರ್ಕಿಸಿ ಸರಿಪಡಿಸಿ ಕೊಳ್ಳುವಂತೆ ತಿಳಿಸಲಾಯಿತು.

**ನೋಂದಣಿ ಶುಲ್ಕ ವಸೂಲಾತಿ ಬಗ್ಗೆ**

- ಪ್ರಾಥಮಿಕ ಶಾಲಾ ವಿಭಾಗದಲ್ಲಿ ಶುಲ್ಕ ವಿನಾಯತಿ ಇರುವುದರಿಂದ, ಸದರಿ ಶಾಲೆಗಳಿಂದ ಕ್ರೀಡಾ ನೋಂದಣಿ ಶುಲ್ಕದ ವಂತಿಗೆಯನ್ನು ಮತ್ತು ವಿವಿದ ಹಂತದಲ್ಲಿ ನಡೆಯುವ ಕ್ರೀಡಾ ಕೂಟಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ಲಭ್ಯವಿರುವ ಯಾವುದೇ ಅನುದಾನದ ಚಾಲ್ತಿ/ಸಂಚಿತ ನಿಧಿಯಿಂದ ಪ್ರವಾಸ ಭತ್ಯ ಮತ್ತು ದಿನ ಭತ್ಯ ಭರಿಸಬಹುದು.
- ಪ್ರೌಢಶಾಲಾ ವಿಭಾಗದಲ್ಲಿ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಈ ಕೆಳಗಿನ ಪಟ್ಟಿಯಂತೆ ನೋಂದಣಿ ಶುಲ್ಕವನ್ನು ಸಂಗ್ರಹಿಸುವುದು..
- 2018–19ನೇ ಸಾಲಿನಲ್ಲಿ ಈ ಕೆಳಕಂಡಂತೆ ಶಾಲೆಗಳಿಂದ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ನೊಂದಣಿ ಶುಲ್ಕವನ್ನು ಸಂಗ್ರಹಿಸುವುದು.

| ಕ್ರ ಸಂ | ವಿದ್ಯಾರ್ಥಿ ಸಂಖ್ಯೆ | ಪ್ರಾಥಮಿಕ ಶಾಲೆ ರೂ....ಗಳಲ್ಲಿ | ಪ್ರೌಢ ಶಾಲೆ |
|---|---|---|---|
| 1 | 1ರಿಂದ 100 | 100.00 | 200.00 |
| 2 | 101 ರಿಂದ 150 | 150.00 | 250.00 |
| 3 | 151 ರಿಂದ 250 | 200.00 | 300.00 |
| 4 | 251 ರಿಂದ 500 | 300.00 | 500.00 |
| 5 | 501 ರಿಂದ750 | 400.00 | 700.00 |
| 6 | 751 ರಿಂದ1000 | 500.00 | 800.00 |
| 7 | 1000 ಕ್ಕೂ ಹೆಚ್ಚು | 700.00 | 1000.00 |

ಈ ಪ್ರಕಾರ ಸಂಗ್ರಹವಾಗುವ ನೋಂದಣಿ ಶುಲ್ಕವನ್ನು ತಾಲ್ಲೂಕ ಹಂತದಲ್ಲಿ ವೆಚ್ಚ ಮಾಡುವ ಪ್ರಮಾಣ

| ಕ್ರ.ಸಂ | ಸಂಘಟನೆ ಹಂತ | ಪ್ರಾಥಮಿಕ ವಿಭಾಗಕ್ಕೆ ಶೇಕಡ | ಪ್ರೌಢ ವಿಭಾಗಕ್ಕೆ ಶೇಕಡ | ಪ್ರೌಢ ಶಾಲಾ ವಿಭಾಗದಲ್ಲಿ ನೇರ ತಾಲ್ಲೂಕು ಮಟ್ಟ ಸಂಘಟನೆ ಮಾಡಿದರೆ |
|---|---|---|---|---|
| 1. | ವಲಯ ಹಂತ | 65% | 30% | -- |
| 2. | ತಾಲ್ಲೂಕ ಹಂತ | 25% | 40% | 50% |
| 3. | ಜಿಲ್ಲಾ ಹಂತ | 10% | 30% | 50% |

- ಪ್ರಯಾಣ ಭತ್ಯೆ:-

  ಪ್ರಯಾಣದ ಅವಧಿಯು 12 ಗಂಟೆಯೊಳಗೆ ಅರ್ಧ ದಿನಭತ್ಯೆ ಮತ್ತು ಪ್ರಯಾಣದ ಅವಧಿ 12 ಗಂಟೆ ಮೇಲ್ಪಟ್ಟಾಗ 1 ದಿನಭತ್ಯೆ ಹಾಗೂ ವಾಸ್ತವಿಕ ಸಾಮಾನ್ಯ ಬಸ್ ದರ ರೈಲ್ವೆ/ 2ನೇ ದರ್ಜೆಯ ಪ್ರಯಾಣ ದರವನ್ನು ನೀಡುವುದು. ತಂಡದ ಮ್ಯಾನೇಜರ್ ಪ್ರಯಾಣಿಸಿದ ಬಸ್ ಟಿಕೇಟ್/ರೈಲ್ವೆ ಟಿಕೇಟನ್ನು ಮತ್ತು ಕ್ರೀಡಾಪಟುಗಳಿಗೆ ಹಣ ಪಾವತಿಸಿದ ಬಗ್ಗೆ ಸ್ವೀಕೃತಿಯನ್ನು ಪಡೆದು, ದಾಖಲೆಗಳನ್ನು ಸಲ್ಲಿಸುವುದು.

  **ವಿಶೇಷ ಸೂಚನೆ:**

  1. ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ನಿಯಮಾನುಸಾರ ಪ್ರಯಾಣ ಭತ್ಯೆ/ದಿನಭತ್ಯೆ ಗಳನ್ನು ಶಾಲಾ ಕ್ರೀಡಾ ಚಾಲ್ತಿ ಅಥವಾ ಇತರೆ ಯಾವುದೇ ಸಂಚಿತ ನಿಧಿಯಿಂದ ಭರಿಸುವುದು.
  2. ವಲಯ/ಜಿಲ್ಲಾ/ ವಿಭಾಗ/ ರಾಜ್ಯ ಮತ್ತು ರಾಷ್ಟ್ರಮಟ್ಟದ ಕ್ರೀಡಾಕೂಟಗಳಿಗೆ,ರಾಷ್ಟ್ರೀಯ ಹಬ್ಬಗಳು ಹಾಗೂ ಇಲಾಖೆಯು ಸಂಘಟಿಸುವ ಕಾರ್ಯಕ್ರಮಗಳಿಗೆ ತೆರಳುವ ಪಥ ಸಂಚಲನ ತಂಡ ಮತ್ತು ವಾದ್ಯ ತಂಡದ ವಿದ್ಯಾರ್ಥಿಗಳಿಗೆ ತಲಾ ರೂ.50/-ರಂತೆ ದಿನಭತ್ಯೆ ಹಾಗೂ ವಾಸ್ತವಿಕ ಬಸ್ ದರವನ್ನು ಶಾಲಾ ಕ್ರೀಡಾ ಚಾಲ್ತಿ ಅಥವಾ ಇತರೆ ಯಾವುದೇ ಸಂಚಿತ ನಿಧಿಯಿಂದ ಭರಿಸಲು ಶಾಲಾ ಮುಖ್ಯಸ್ಥರಿಗೆ ಅನುಮತಿ ನೀಡಿದೆ.[ವಿದ್ಯಾರ್ಥಿಗಳ ಸಂಖ್ಯೆ ಗರಿಷ್ಠ 35ಕ್ಕೆ ಮೀರಬಾರದು]

ಇಂತಹ ಖರ್ಚು/ವೆಚ್ಚಗಳನ್ನು ಭರಿಸುವ ಬಗ್ಗೆ ಜಿಲ್ಲಾ ಉಪ ನಿರ್ದೇಶಕರು[ಆ] ಇವರ ಅನುಮತಿ ಪಡೆಯುವುದು. ವಿಳಂಬವಾದಲ್ಲಿ ಅನುಮೋದನೆ ಆಗುವವರೆಗೂ ಯಾವುದೇ ಹಣವನ್ನು ವಿದ್ಯಾರ್ಥಿ ಕ್ರೀಡಾನಿಧಿಯಿಂದ ಡ್ರಾ ಮಾಡಲು ಅವಕಾಶವಿಲ್ಲವೆಂದು ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾಯಿತು.

**ಕ್ರಮ:- ತಾಲೂಕ ದೈಹಿಕ ಶಿಕ್ಷಣ ಪರಿವೀಕ್ಷಕರು (ತಾಲ್ಲೂಕು ಹಂತ)**

**4)2018-19 ನೇ ಸಾಲಿಗೆ ಹೊಸ ಕ್ರೀಡೆಗಳ ಸೇರ್ಪಡೆ ಕುರಿತು.**

- ತೀರ್ಮಾನ:- 2018-19 ನೇ ಸಾಲಿಗೆ ಈ ಕೆಳಗಿನ ಹೊಸಕ್ರೀಡೆಗಳ ಸೇರ್ಪಡೆ ಕುರಿತು ವಿಧಾನ ಪರಿಷತ್ತುಗಳ ಸದಸ್ಯರುಗಳು ಮತ್ತು ವಿಧಾನ ಸಭೆಯ ಸದಸ್ಯರುಗಳು, ಸಂಘ ಸಂಸ್ಥೆಗಳ ಪದಾಧಿಕಾರಿಗಳಿಂದ ಈ ಕೆಳಗಿನ ಕ್ರೀಡೆಗಳನ್ನು ಹೊಸದಾಗಿ ಸೇರ್ಪಡೆ ಮಾಡುವಂತೆ ಕೋರಿರುವುದರಿಂದ ಸಭೆಯು ಈಗ ಶಾಲಾ ಹಂತದಿಂದ ರಾಜ್ಯ ಮಟ್ಟದವರೆಗೆ ಸಂಘಟಿಸಿ ರಾಷ್ಟ್ರ ಮಟ್ಟಕ್ಕೆ ಕಳುಹಿಸುವ ಕ್ರೀಡೆಗಳ ಸ್ಪರ್ಧಾಳುಗಳಿಗೆ ಜಿಲ್ಲೆಯಲ್ಲಿ ಸಂಗ್ರಹವಾಗುವ ವಿದ್ಯಾರ್ಥಿ ಕ್ರೀಡಾ ನಿಧಿ ಕೊರತೆಯಾಗುತ್ತದೆ. ಹೊಸ ಕ್ರೀಡೆಗಳಿಗಾಗಿ ಸೇರ್ಪಡೆಗೊಳಿಸಲು ಈ ಕ್ರೀಡೆಗಳ ಬಗ್ಗೆ ನಮ್ಮ ದೈಹಿಕ ಶಿಕ್ಷಣ ಶಿಕ್ಷಕರಿಗೆ ತರಬೇತಿಯಾಗಿರುವುದಿಲ್ಲ, ಅವರಿಗೆ ಮೊದಲು ತರಬೇತಿ ನೀಡಿದರೆ ಶಾಲಾ ಹಂತದಲ್ಲಿ ಮಕ್ಕಳಿಗೆ ತರಬೇತಿ ನೀಡಲು ಸಾಧ್ಯವಾಗುತ್ತದೆ. ಹೊಸ ಕ್ರೀಡೆಗಳಿಗಾಗಿ ಸಂಬಂಧಿಸಿದ ಕ್ರೀಡೋಪಕರಣಗಳ ಖರೀದಿ ಮಾಡಲು ಪ್ರಾಥಮಿಕ ವಿಭಾಗದಲ್ಲಿ ಶುಲ್ಕ ವಿನಾಯಿತಿ ಇರುವುದರಿಂದ ಖರೀದಿಸಲು ಹಣದ ಕೊರತೆ. ಪ್ರೌಢ ಶಾಲೆಗಳಲ್ಲಿ ಶೇ:65 ರಲ್ಲಿ ಪ್ರಚಲಿತ ಕ್ರೀಡೆಗಳಿಗೆ ಬೇಕಾಗುವ ಕ್ರೀಡೋಪಕರಣ ಖರೀದಿಗೆ ಶಾಲೆಗಳಲ್ಲಿ ಹಣದ ಕೊರತೆ ಇರುವುದರಿಂದ ಎಲ್ಲಾ ಜಿಲ್ಲೆಗಳಲ್ಲಿ ಈ ಕ್ರೀಡೆಗಳನ್ನು ಅಳವಡಿಸಲು ಸಾಧ್ಯವಾಗುವಾಗುವುದಿಲ್ಲ ಅಂತಿಮವಾಗಿ ಶೇ: 50ರಷ್ಟು ಜಿಲ್ಲೆಗಳಲ್ಲಿ ಎಲ್ಲಾ ಹಂತಗಳಲ್ಲಿ ಈ ಕ್ರೀಡೆಗಳಲ್ಲಿ ತಂಡಗಳು ಭಾಗವಹಿಸಿದರೆ, ಮುಂದಿನ ಹಂತಗಳಲ್ಲಿ ಸಂಘಟನೆ ಮಾಡುವುದಾಗಿ ಸಭೆಯಲ್ಲಿ ತೀರ್ಮಾನಿಸಿತ್ತು.

**ಸೇರ್ಪಡೆಗಾಗಿ ಕೋರಿರುವ ಕ್ರೀಡೆಗಳ ವಿವರ.**

- ಆಟ್ಯಾ-ಪಟ್ಯಾ, ಪ್ಲೋರ್ ಬಾಲ್, ಸೂಪರ್ ಸೆವನ್ ಕ್ರಿಕೇಟ್, ಸೈಕಲ್ ಪೋಲೋ, ರಗ್ಬೀ, ಟೆನಿ-ಕ್ವಾಯಿಟ್ ಮತ್ತು ಅಮೇಚೂರ ಸಿಲಂಬಮ್ & ಬಾಕ್ಸಿಂಗ್

**ಕ್ರಮ: ಕ್ಷೇತ್ರ ಶಿಕ್ಷಣಾಧಿಕಾರಿಗಳು/ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರು (ತಾಲ್ಲೂಕ ಹಂತ)**
**ಉಪನಿರ್ದೇಶಕರು[ಆಡಳಿತ]/ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು (ಜಿಲ್ಲಾ ಹಂತ)**

**5. ದೈಹಿಕ ಶಿಕ್ಷಣ ಶಿಕ್ಷಕರಿಲ್ಲದ ಶಾಲೆಗಳಲ್ಲಿ ದೈಹಿಕ ಶಿಕ್ಷಣದ ಚಟುವಟಿಕೆಗಳ ಬಗ್ಗೆ.**

- **2007-08ರಿಂದ** ದೈಹಿಕ ಶಿಕ್ಷಣ ವಿಷಯವನ್ನು ಇತರೆ ವಿಷಯಗಳಂತೆ ಕಡ್ಡಾಯ ವಿಷಯವೆಂದು ಇಲಾಖೆಯು ಪರಿಗಣಿಸುವುದರಿಂದ ಈ ವಿಷಯವನ್ನು ಬೋಧಿಸಲು ದೈಹಿಕ ಶಿಕ್ಷಣ ಶಿಕ್ಷಕರು, ರಾಜ್ಯ ಎಲ್ಲಾ ಶಾಲೆಗಳಲ್ಲಿ ಇರುವುದಿಲ್ಲ. ಅಂತಹ ಶಾಲೆಗಳ ಮಕ್ಕಳ ಹಿತದೃಷ್ಠಿಯಿಂದ ಈ ವಿಷಯವನ್ನು ಬೋಧಿಸಲು ಕ್ರೀಡಾ ಚಟುವಟಿಕೆಗಳನ್ನು ರೂಡಿಸಲು ತಾಲ್ಲೂಕು ವ್ಯಾಪ್ತಿಯಲ್ಲಿ 8 ಕಿ.ಮಿ. ಅಂತರದ ಶಾಲೆಗಳಿಗೆ ಮಕ್ಕಳ ಸಂಖ್ಯೆಗೆನುಗುಣವಾಗಿ ವಾರದಲ್ಲಿ 03 ದಿನ ಮೂಲ ಶಾಲೆಯಲ್ಲಿ, 03 ದಿನ ಪಕ್ಕದ ಶಾಲೆಗೆ ನಿಯೋಜನೆ ಮಾಡಿ ದೈಹಿಕ ಶಿಕ್ಷಣ ವಿಷಯವನ್ನು ಬೋಧನೆ ಮಾಡಲು ಆಯಾ ಜಿಲ್ಲೆಯ ತಾಲ್ಲೂಕು ಹಂತದಲ್ಲಿ ಬಿ.ಇ.ಓ ಗಳು ಮತ್ತು ಟಿ.ಪಿ.ಇ.ಓ ಗಳರಿಂದ ಪಟ್ಟಿ ತಯಾರಿಸಿ ಉಪನಿರ್ದೇಶಕರಿಂದ ಅನುಮೋದನೆ ಪಡೆದು, ಕ್ರಮ ವಹಿಸುವಂತೆ ತಿಳಿಸಲಾಯಿತ್ತ.

**ಕ್ರಮ: ಕ್ಷೇತ್ರ ಶಿಕ್ಷಣಾಧಿಕಾರಿಗಳು/ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರು (ತಾಲ್ಲೂಕ ಹಂತ)**

**6. 8ನೇ ತರಗತಿ ವಿದ್ಯಾರ್ಥಿಗಳ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಬಗ್ಗೆ (ರ್‍ಯಾಂಕಿಂಗ್ ಮತ್ತು ಶೇಕಡ ಪ್ರಮಾಣ)**

- ತೀರ್ಮಾನ: ಉನ್ನತಿಕರಿಸಿದ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 08ನೇ ತರಗತಿಯಲ್ಲಿ ವ್ಯಸಾಂಗ ಮಾಡುತ್ತಿರುವ 14 ವಯೋಮಿತಿ ಬಾಲಕ ಮತ್ತು ಬಾಲಕಿಯರಿಗೆ ಹಾಗೂ ಸರ್ಕಾರಿ, ಅನುದಾನ ಅನುದಾನ ರಹಿತ ಪ್ರೌಢ ಶಾಲೆಗಳಲ್ಲಿಯ 08ನೇ ತರಗತಿಯ 14 ವರ್ಷದ ವಯೋಮಿತಿ ವಿದ್ಯಾರ್ಥಿಗಳು ತಾಲ್ಲೂಕು ಹಂತದಲ್ಲಿ ನಡೆಯುವ ಕ್ರೀಡೆಗಳಲ್ಲಿ ಗೆದ್ದಂತಹ ಪ್ರಾಥಮಿಕ ಶಾಲಾ ತಂಡಗಳಿಗೆ ಪ್ರತಿ ಗುಂಪು ಆಟಗಳಲ್ಲಿ ಶೇ: 30 ರಷ್ಟು ಅಂದರೆ 06 ಮತ್ತು 07ನೇ ತರಗತಿಯ ವಿದ್ಯಾರ್ಥಿಗಳಿಗಿಂತ ಪ್ರತಿಭಾವಂತ ವಿದ್ಯಾರ್ಥಿಗಳಾಗಿದಲ್ಲಿ ಮಾತ್ರ ಸೇರಿಸಿ ಜಿಲ್ಲಾ ಹಂತಕ್ಕೆ ಈ ಕೆಳಗಿನಂತೆ ಸ್ಪರ್ಧಾಳುಗಳನ್ನು ಕಳುಹಿಸುವಂತೆ ಸಭೆಯು ತೀರ್ಮಾನಿಸಿತ್ತು.
- 1. 05 ಜನ ಆಟಗಾರರಿರುವ ಕ್ರೀಡೆಗಳಿಗೆ 05*30/100= 02 ಇದ್ದಲ್ಲಿ ಒಬ್ಬ ವಿದ್ಯಾರ್ಥಿಯನ್ನು.
- 2. 12 ಜನ ಆಟಗಾರರಿರುವ ಕ್ರೀಡೆಗಳಿಗೆ 12*30/100= 04 ಇದ್ದಲ್ಲಿ ಒಬ್ಬ ವಿದ್ಯಾರ್ಥಿಯನ್ನು
- 3. 16 ಜನ ಆಟಗಾರರಿರುವ ಕ್ರೀಡೆಗಳಿಗೆ 16*30/100= 05 ಅಂದರೆ 04 ಜನ ವಿದ್ಯಾರ್ಥಿಗಳು
- 4. 18 ಜನ ಆಟಗಾರರಿರುವ ಕ್ರೀಡೆಗಳಿಗೆ 18*30/100= 06 ಅಂದರೆ 05 ಜನ ವಿದ್ಯಾರ್ಥಿಗಳನ್ನು ಸೇರ್ಪಡಿಸಿ ತಂಡಗಳನ್ನು ರಚಿಸಿ ಜಿಲ್ಲಾ ಹಂತಕ್ಕೆ ಕಳುಹಿಸುವುದು. ಆದರೆ, ಪ್ರೌಢ ಶಾಲೆಗಳಲ್ಲಿಯ ಈ ವಿದ್ಯಾರ್ಥಿಗಳು 09 ಮತ್ತು 10ನೇ ತರಗತಿ ವಿದ್ಯಾರ್ಥಿಗಳೊಂದಿಗೆ ರಚಿಸಿದ ತಂಡಗಳಲ್ಲಿ ಪುನಃ ಭಾಗವಹಿಸಲು ಅವಕಾಶವಿರುವುದಿಲ್ಲಾ. ಈ ವಿದ್ಯಾರ್ಥಿಗಳು ಪ್ರಾ/ಪ್ರೌ ಮಾತ್ರ ಭಾಗವಹಿಸಲು ಅವಕಾಶವಿರುತ್ತದೆ.

- **ಲಾನ್ ಟೆನ್ನಿಸ್, ಬ್ಯಾಡ್ಮಿಂಟನ್ [ಷಟ್ಲ್] ಮತ್ತು ಟೇಬಲ್ ಟೆನ್ನಿಸ್:** ಈ ಪಂದ್ಯಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾಗಿರುವ ಪ್ರಥಮ ಮತ್ತು ದ್ವಿತೀಯ ಸ್ಥಾನ ಗಳಿಸಿರುವ ತಂಡಗಳ ಕ್ರೀಡಾಪಟುಗಳೊಂದಿಗೆ ಸಂಬಂಧಿಸಿದ ರಾಜ್ಯ ಮತ್ತು ರಾಷ್ಟ್ರೀಯ ಕ್ರೀಡಾ ಸಂಸ್ಥೆಗಳಿಂದ 01 ರಿಂದ 6ನೇ ರ್‍ಯಾಂಕಿಂಗ್ ಸ್ಥಾನವನ್ನು ಪಡೆದಿದ್ದರೆ ಸದರಿ ಕ್ರೀಡಾಪಟುಗಳನ್ನು ಜಿಲ್ಲಾಮಟ್ಟದಲ್ಲಿ ವಿಜೇತರಾಗಿ ಅಯ್ಕೆಯಾದ 5 ಕ್ರೀಡಾಪಟುಗಳೊಂದಿಗೆ ನೇರವಾಗಿ ರ್‍ಯಾಂಕಿಂಗ್ ಪಡೆದ ಆಟಗಾರರನ್ನು ಸೇರ್ಪಡಿಸಿ ಶ್ರೇಯಾಂಕ ಆಧಾರದಲ್ಲಿ 5 ಜನ ಆಟಗಾರರನ್ನು ಮಾತ್ರ ಆಯ್ಕೆ ಮಾಡಿ ಜಿಲ್ಲಾ ತಂಡವನ್ನು ಮುಂದಿನ ಹಂತಕ್ಕೆ ಕಳುಹಿಸುವುದು. [1 ರಿಂದ 6 ರ್‍ಯಾಂಕಿಂಗ್ ಪಡೆದ ಕ್ರೀಡಾಪಟುಗಳು ರ್‍ಯಾಂಕಿಂಗ್ ಪಡೆದಿರುವ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿ ಜಿಲ್ಲಾಮಟ್ಟದಲ್ಲಿ ನೇರವಾಗಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಆದರೂ ಕ್ರೀಡಾಪಟುಗಳು ಸ್ವಇಚ್ಛೆಯಿಂದ ತಾಲ್ಲೂಕು ಹಂತದಲ್ಲಿ ಶಾಲಾ ತಂಡದಿಂದ ಭಾಗವಹಿಸಿ ವಿಜೇತರಾದಲ್ಲಿ ಮಾತ್ರ ಮುಂದಿನ ಹಂತಕ್ಕೆ ಕಳುಹಿಸುವುದು. ಒಂದು ವೇಳೆ ಪರಾಭವಗೊಂಡಲ್ಲಿ ಇಂತಹ ಕ್ರೀಡಾಪಟುಗಳನ್ನು ಮುಂದಿನ ಹಂತಕ್ಕೆ ಪರಿಗಣಿಸುವಂತಿಲ್ಲ]. 8ನೇ ತರಗತಿಯಲ್ಲಿನ 14 ವರ್ಷ ವಯೋಮಿತಿಯೊಳಗಿನ ಇಬ್ಬರು ಕ್ರೀಡಾಪಟುಗಳಿಗೆ ಮಾತ್ರ ಅವಕಾಶ ನೀಡುವುದು. [2ನೇ ಸ್ಥಾನದಲ್ಲಿರುವವರಾಗಲಿ ಅಥವಾ 8ನೇ ತರಗತಿಯಿಂದ ನೇರವಾಗಿ ಆಯ್ಕೆಗೆ ಬರುವವರಾಗಿರಬಹುದು] ಜಿಲ್ಲಾಮಟ್ಟದಿಂದ ವಿಭಾಗಮಟ್ಟಕ್ಕೆ ಕಳುಹಿಸುವ ತಂಡದಲ್ಲಿ 8ನೇ ತರಗತಿಯ ಇಬ್ಬರು ಕ್ರೀಡಾಪಟುಗಳಿಗೆ ಮಾತ್ರ ಅವಕಾಶ ನೀಡುವುದು.
- **ವಿಶೇಶ ಸೂಚನೆ: ಲಾನ್ ಟೆನ್ನಿಸ್, ಬ್ಯಾಡ್ಮಿಂಟನ್ [ಷಟಲ್] ಮತ್ತು ಟೇಬಲ್ ಟೆನ್ನಿಸ್ :**

  STATE ASSOSIATION ವತಿಯಿಂದ ನಡೆದ ಕ್ರೀಡೆಗಳಲ್ಲಿ ಭಾಗವಹಿಸಿ, 01 ರಿಂದ 06ನೇ ರ್‍ಯಾಂಕ್ ಪಡೆದ ಬಗ್ಗೆ STATE ASSOSIATION ವತಿಯಿಂದ ನೀಡಿದ ಪ್ರಮಾಣ ಪತ್ರದ ಜೊತೆಗೆ ASSOSIATION Letter head ನಲ್ಲಿ ದೃಢೀಕರಣ ಪತ್ರ, ಶಾಲೆಯ ಮುಖ್ಯೋಪಾದ್ಯಾಯರಿಂದ ದೃಢೀಕರಣ ಪತ್ರವನ್ನು ಸಂಘಟಕರಿಗೆ, ಮುಂಚಿತವಾಗಿ ನೀಡುವುದ ಕಡ್ಡಾಯ.

  ವೈಯಕ್ತಿಕ ಆಟಗಳಿಗೆ ಸಂಬಂಧಿಸಿ 09 ವೈಯಕ್ತಿಕ ಸ್ಪರ್ಧೆಗಳಲ್ಲಿ ತಾಲ್ಲೂಕು ಹಂತದಲ್ಲಿ ಪ್ರತ್ಯೇಕವಾಗಿ ಸ್ಪರ್ಧೆ ನಡೆಸಿ ಪ್ರಥಮ ಬಂದವರನ್ನು ಮಾತ್ರ ರಾಜ್ಯ ಮಟ್ಟದಕ್ಕೆ ಆಯ್ಕೆ ಮಾಡುವುದು ಪ್ರಾಥಮಿಕ ವಿಭಾಗದ 06 ಮತ್ತು 07ನೇ ತರಗತಿಯ ವಿದ್ಯಾರ್ಥಿಗಳು ಪ್ರಥಮ ಮತ್ತು ದ್ವಿತೀಯ ಸ್ಥಾನಕ್ಕೆ ಹಾಗೂ ತೃತೀಯ ಸ್ಥಾನಕ್ಕೆ ಪ್ರಥಮ ಪಡೆದ 08ನೇ ತರಗತಿಯ ವಿದ್ಯಾರ್ಥಿಗಳನ್ನು ಸೇರಿಸಿ, ರಾಜ್ಯ ಮಟ್ಟಕ್ಕೆ ಭಾಗವಹಿಸಲು ಅರ್ಹತಯಾದಿಯನ್ನು ತಯಾರಿಸಿ ರಾಜ್ಯ ಮಟ್ಟದ ಕ್ರೀಡಾ ಕೂಟ ಸಂಘಟಿಸುವ ಜಿಲ್ಲೆಗೆ ಕಳುಹಿಸುವುದು.

  **ಕ್ರಮ: ಜಿಲ್ಲಾ ಉಪ ನಿರ್ದೇಶಕರು(ಆಡಳಿತ) ಮತ್ತು ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು**

7. **ಭಾರತ ಸೇವಾದಳ ಶಾಖೆಗಳ, ಭಾರತ ಸ್ಕೌಟ್ಸ್, ಗೈಡ್ಸ್ ಚಟುವಟಿಕೆಗಳ ಬಗ್ಗೆ.**

ಭಾರತ ಸೇವಾದಳ ಶಾಖೆಗಳ ತರಬೇತಿ ಮತ್ತು ಭಾರತ ಸ್ಕೌಟ್ಸ್ ಸಂಸ್ಥೆಗಳಲ್ಲಿ ನಡೆಯುತ್ತಿರುವ ನೋಂದಣಿ ಬಗ್ಗೆ ಹಾಗೂ ತರಬೇತಿ ನಡೆಯುವ ಸ್ಥಳಗಳಿಗೆ ಬೇಟಿ ನೀಡಿ ಮಾರ್ಗದರ್ಶನ ಅಥಾವ ಮೇಲ್ವಿಚಾರಣೆ ಮಾಡುವಂತೆ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳ/ತಾಲ್ಲೂಕು ದೈಹಿಕ ಪರಿವೀಕ್ಷಕರು ಕಡ್ಡಾಯವಾಗಿ ಮಾಡುವುದು ಎಂದು ಮಾನ್ಯ ನಿರ್ದೇಶಕರು (ಪ್ರೌಢ ಶಿಕ್ಷಣ) ಸಭೆಯಲ್ಲಿ ಸೂಚಿಸಿದರು. ಹಾಗೆಯೇ ಸ್ಕೌಟ್ಸ್ ಮತ್ತು ಗೈಡ್ಸ್, ಬುಲ್-ಬುಲ್, ರೇಂಜರ್ ಮತ್ತು ರೋವರ್ಸ ಎಲ್ಲ ಚಟುವಟಿಕೆಗಳ ಬಗ್ಗೆ ಮಾರ್ಗದರ್ಶನ ಮೇಲ್ವಚಾರಣೆ ಅಗತ್ಯ.

**ಕ್ರಮ: ಜಿಲ್ಲಾ ಉಪ ನಿರ್ದೇಶಕರು(ಆಡಳಿತ) ಮತ್ತು ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು**

8. **ಆಟದ ಮೈದಾನರಹಿತ ಶಾಲೆಗಳಲ್ಲಿ ದೈಹಿಕ ಶಿಕ್ಷಣದ ಕ್ರೀಡಾ ಚಟುವಟಿಕೆಗಳನ್ನು ರೂಡಿಸುವ ಬಗ್ಗೆ.**

- ತೀರ್ಮಾನ: 2007–08ನೇ ಸಾಲಿನಿಂದ ದೈಹಿಕ ಶಿಕ್ಷಣ ಕಡ್ಡಾಯವಾಗಿರುವುದರಿಂದ, ದೈಹಿಕ ಶಿಕ್ಷಣದ ಪ್ರಯೋಗಿಕ ಚಟುವಟಿಕೆಗಳನ್ನು ರೂಡಿಸುವುದು, ಕನಿಷ್ಠ ಮೈದಾನ ಅವಶ್ಯಕವಿರುತ್ತದೆ. ಅದರೂ ಮೈದಾನ ರಹಿತ ಶಾಲೆಗಳಲ್ಲಿ ದೈಹಿಕ ಶಿಕ್ಷಣದ ಚಟುವಟಿಕೆಗಳನ್ನು, ಶಾಲೆಗೆ ಲಭ್ಯವಿರು ಒಳಾಂಗಣಗಳಲ್ಲಿ, ಸಾರ್ವಜನಿಕ ಮೈದಾನಗಳಲ್ಲಿ, ಶಾಲೆಯ ಅಕ್ಕ ಪಕ್ಕದ ಖಾಸಗಿ ಮೈದಾನಗಲ್ಲಿ, ಯುವ ಜನ ಸೇವೆ ಇಲಾಖೆಗೆ ಸಂಬಂಧಿಸಿದ ಕ್ರೀಡಾಂಗಣಗಳಲ್ಲಿ ಕ್ರೀಡೆಗಳನ್ನು, ಯೋಗ, ಪಥ ಸಂಚಲನ ಇತರೆ ಹಗುರ ಉಪಕರಣ ಚಟುವಟಿಕೆಗಳನ್ನು ರೂಡಿಸಿ ವಿದ್ಯಾರ್ಥಿಗಳನ್ನು ದೈಹಿಕವಾಗಿ ಹಾಗೂ ಮಾನಸಿಕವಾಗಿ ಸಬಲಗೊಳಿಸುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

  **ಕ್ರಮ: ಜಿಲ್ಲಾ ಉಪ ನಿರ್ದೇಶಕರು(ಆಡಳಿತ) ಮತ್ತು ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು**

**9. ಶಾಲೆಗಳಲ್ಲಿ ನಿರುಪಯುಕ್ತ ಕ್ರೀಡಾ ಸಾಮಾಗ್ರಿಗಳ ವಿಲೇವಾರಿ ಬಗ್ಗೆ.**

- ತೀರ್ಮಾನ: ದೈಹಿಕ ಶಿಕ್ಷಣದ ಚಟುವಟಿಕೆಗಳನ್ನು ರೂಡಿಸಲು ಶಾಲೆಯಲ್ಲಿ ಇಲಾಖಾದೇಶದ ಪ್ರಕಾರ ವಸೂಲಾಯಿತಿ ಕ್ರೀಡಾ ಶುಲ್ಕದ ಶೇ: 65% ಹಣದಿಂದ ಖರೀದಿ ನಿಯಮದಂತೆ ಖರೀದಿಸಿದ ಉಪಕರಣಗಳು ಬಳಕೆಮಾಡಿ ನಿರುಪಯುಕ್ತಗೊಂಡಿರುತ್ತದೆ., ಇಂತಹ ಕ್ರೀಡೋಪಕರಣಗಳನ್ನು ದಾಸ್ತಾನು ವಹಿಯಿಂದ ಕಡಿಮೆ ಮಾಡಲು ಪ್ರತಿ ವರ್ಷ ಯಾದಿ ತಯಾರಿಸಿ, ಬಿ.ಇ.ಒ ಗಳಿಂದ ಅನುಮೋದನೆ ಪಡೆದು ಕಡಿಮೆಗೊಳಿಸಲು ಕ್ರಮ ವಹಿಸುವುದು.

**ಕಡಿಮೆ ಮಾಡುವ ಬಗ್ಗೆ ಸೂಚನೆ:**

1. ಟಿ.ಪಿ.ಒ ರವರು 5.000 ರೂಪಾಯಿಗಳ ಕ್ರೀಡಾ ಸಾಮಗ್ರಿಗಳನ್ನು ಕಡಿಮೆ ಮಾಡಲು ಬಿ.ಇ.ಒ ಗೆ ಶಿಫಾರಸ್ಸು ಮಾಡಬಹುದ.
2. ಡಿ.ಪಿ.ಇ.ಒ ರವರು 10.000 ರೂಪಾಯಿಗಳ ಮೊತ್ತದ ಕ್ರೀಡಾ ಸಾಮಾಗ್ರಿಗಳನ್ನು ಕಡಿಮೆ ಮಾಡಲು ಉ.ನಿ ಯವರಿಗೆ ಶಿಫಾರಸ್ಸು ಮಾಡಬಹುದು.

**ಕ್ರಮ: ಜಿಲ್ಲಾ ಉಪ ನಿರ್ದೇಶಕರು(ಆಡಳಿತ) ಮತ್ತು ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು**

**10 ವಿದ್ಯಾರ್ಥಿ ಕ್ರೀಡಾ ನಿಧಿ ಖಾತೆಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಜಂಟಿ ಹೆಸರಿನಲ್ಲಿ ಖಾತೆ ತೆರೆಯುವ ಬಗ್ಗೆ.**

- ತೀರ್ಮಾನ: ಇಲಾಖೆಯ ನಿರ್ದೇಶನದ ಪ್ರಕಾರ, ಪ್ರಾ & ಪ್ರೌ ಶಾಲೆಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ವಸೂಲಾತಿ ಮಾಡುವ ವಿದ್ಯಾರ್ಥಿ ಕ್ರೀಡಾ ನಿಧಿ ಹಣವನ್ನು ತಾಲ್ಲೂಕಿನಲ್ಲಿ ಬಿ.ಇ.ಒ ಮತ್ತು ಟಿ.ಪಿ.ಇ.ಒ ಇವರ ಜಂಟಿಯಾಗಿ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಖಾತೆ ತೆರೆಯುವುದು ಕಡ್ಡಾಯ. ಅದರಂತೆ ಜಿಲ್ಲಾ ಮಟ್ಟದಲ್ಲಿಯೂ ಸಹ ಉ.ನಿ ಮತ್ತು ಡಿ.ಪಿ.ಇ.ಒ ರವರ ಜಂಟಿಯಾಗಿ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಖಾತೆ ತೆರೆಯುವುದು ಕಡ್ಡಾಯವಾಗಿದ್ದು, ಇದವರೆಗೂ ಜಂಟಿ ಖಾತೆ ತೆರೆಯದೆ ಇರುವುದು ತಿಳಿದಿರುತ್ತದೆ. ಇದರಿಂದ ರಾಜ್ಯ ಕಛೇರಿಯಿಂದ ಅನುದಾನಗಳನ್ನು ಆರ್.ಟಿ.ಜಿ.ಎಸ್. ಅಥವ ನೆಫ್ಟ್ ಮೂಲಕ ಜಮಾ ಮಾಡುವಾಗ ತೊಂದರೆಯಾಗುತ್ತದೆ. ಅಲ್ಲದೆ. ಈ ನಿಧಿ ಹಣವನ್ನು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಜಂಟಿ ಖಾತೆಯನ್ನು ತೆರೆಯುವುದು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಕ್ರಮ: ಜಿಲ್ಲಾ ಉಪ ನಿರ್ದೇಶಕರು(ಆಡಳಿತ) ಮತ್ತು ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು**

**11. 2018–19ನೇ ಸಾಲಿಗೆ ಮುಂದುವರೆದ ಯೋಜನೆಯ ಅಡಿಯ ಅನುದಾನದ ಬಗ್ಗೆ.**

- ದೈಹಿಕ ಶಿಕ್ಷಣ ಅಭಿವೃದ್ಧಿಗಾಗಿ ಮುಂದುವರೆದ ಯೋಜನೆಯಡಿ ಬಿಡುಗಡೆ ಮಾಡುವ ಅನುದಾನವನ್ನು ಸಕಾಲದಲ್ಲಿ ಸೆಳೆದು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಸಂಬಂಧಿಸಿದಂತೆ ಉಪಯೋಗತಾ ಪ್ರಮಾಣ ಪತ್ರಗಳನ್ನು ತಪ್ಪದೇ ಆಯುಕ್ತರ ಕಛೇರಿಗೆ ಸಲ್ಲಿಸಲು ಸೂಚಿಸಲಾಯಿತು.
- ಅನುದಾನದ ಬಗ್ಗೆ ಇಲಾಖೆಯಿಂದ ಬಿಡುಗಡೆಯಾದ ಕಂದಾಯ ಹೋಬಳಿಗಳಿಗೆ ಅನುದಾನವನ್ನು ನಿಯಮಾನುಸರವೇ ಖರ್ಚು ಮಾಡುವುದು. ಒಂದು ವೇಳೆ ಬೇರೆ ಜಿಲ್ಲೆಯವರು ಕಂದಾಯ ಹೋಬಳಿ/ತಾಲ್ಲೂಕುಗಳು ಹೆಚ್ಚಿನ ಸಂಖ್ಯೆ ಮಾಡಿಕೊಂಡಿದಲ್ಲಿ ಬಿಡುಗಡೆಯಾಗಿರುವ ಅನುದಾನವನ್ನು ಸಮವಾಗಿ ಹಂಚಿಕೆ ಮಾಡಿ ಅನುದಾನವನ್ನು ಬಳಕೆ ಮಾಡಿಕೊಳ್ಳಲು ತೀರ್ಮಾನಿಸಲಾಯಿತ್ತು.
- ಮುಂದುವರೆದ ಯೋಜನೆಯ ಅಡಿಯ ಬಿಡುಗಡೆ ಮಾಡಿದ ಅನುದಾನವನ್ನು ನಿಯಮಾನುಸಾರ ಬಳಕೆ ಮಾಡಿವುದು ಕಡ್ಡಾಯವಾಗಿದ್ದು, ಹಾಗೂ ಬಿಡುಗಡೆ ಮಾಡಿದ ಅನುದಾನವನ್ನು ಸಂಪೂರ್ಣ ಬಳಸಿ ಸರ್ಕಾರಕ್ಕೆ ಪುನಃ ಜಮಾ ಮಾಡದಂತೆ ಅನುದಾನವನ್ನು ಉಪಯೋಗಿಸುವುದು.
- 2017–18ನೇ ಸಾಲಿಗೆ ಮುಂದುವರೆದ ಯೋಜನೆಯ ಅಡಿಯಲ್ಲಿ ಮಂಜೂರಾದ ಅನುದಾನವನ್ನು ಬಳಸದೆ ಇರುವ ಬಗ್ಗೆ ಸಭೆಯ ಗಮನಕ್ಕೆ ಬಂದಿದ್ದು, ಈ ಅನುದಾನವನ್ನು ಸಂಪೂರ್ಣವಾಗಿ ಬಳಸುವಂತೆ ಮಾನ್ಯ ನಿರ್ದೇಶಕರು ಸೂಚಿಸಿದರು

**12. 2018–19ನೇ ಸಾಲಿಗೆ ಜಿಲ್ಲಾ ವಿದ್ಯಾರ್ಥಿ ಕ್ರೀಡಾ ನಿಧಿಯಿಂದ ಖರ್ಚು ಮಾಡುವ ವಿಷಯಗಳ ಚರ್ಚೆ.**

- ತೀರ್ಮಾನ: ಜಿಲ್ಲಾ ಹಂತದಲ್ಲಿ ನೇರವಾಗಿ ಸಂಘಟಿಸುವ ಕ್ರೀಡೆಗಳಿಗೆ ಜಿಲ್ಲಾ ವಿದ್ಯಾರ್ಥಿ ಕ್ರೀಡಾ ನಿಧಿಯಿಂದ ಕಳೆದ ಸಾಲಿನಂತೆ ವೆಚ್ಚ ಮಾಡುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

**13. ಆರ್.ಎಂ.ಎಸ್.ಎ. ಯಿಂದ ಕ್ರೀಡೆಯ ಬಲವರ್ಧನೆಗಾಗಿ ಕಂದಾಯ ಜಿಲ್ಲೆಗಳಿಗೆ ನೀಡುವ ಅನುದಾನ ಬಳಕೆ ಬಗ್ಗೆ.**

- ಆರ್.ಎಂ.ಎಸ್. ಎ. ವತಿಯಿಂದ ನೀಡುವ ಅನುದಾನವನ್ನು ಕಂದಾಯ ಜಿಲ್ಲೆಗಳಿಗೆ ಮಾತ್ರ ಮಂಜೂರು ಮಾಡುತ್ತಿದ್ದು, ಸದರಿ ಅನುದಾನವನ್ನು ಕ್ರೀಡೆಗಳ ಬಲವರ್ಧನೆಗಾಗಿ ಬಳಸಲು ಸಭೆಯು ತೀಮಾನಿಸಿತ್ತು. ನಂತರ ಅನುದಾನದ ಬಳಕೆ ಪ್ರಮಾಣ ಪತ್ರ ಮತ್ತು ಕ್ರೀಡೆಗಳ ಬಲವರ್ಧನೆಗಾಗಿ ಕ್ರೀಡಾ ಕೂಟಗಳಲ್ಲಿ ಬಳಸಿಕೊಂಡ ಬಗ್ಗೆ ಭಾವಚಿತ್ರ ಮತ್ತು ವರದಿಯನ್ನು ನಿರ್ದೇಶಕರು ಆರ್.ಎಂ.ಎಸ್.ಎ. ಬೆಂಗಳೂರು ಇವರಿಗೆ ಸಲ್ಲಿಸಿ ಯಥಾ ಪತ್ರಿಯನ್ನು ಈ ಕಛೇರಿಗೆ ಸಲ್ಲಿಸುವುದು.

**14 ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳ ಚರ್ಚೆ**

**1. ಕ್ರೀಡಾಕೂಟದ ಸಂಘಟನೆಯ ಬಗ್ಗೆ ಚರ್ಚೆ**

<u>ತೀರ್ಮಾನ:</u> ಎಲ್ಲಾ ಹಂತದ ಕ್ರೀಡಾ ಕೂಟಗಳನ್ನು ಸಂಘಟಿಸುವ ಸಂದರ್ಭದಲ್ಲಿ ಸಂಘಟಕರು ಈ ಕೆಳಗಿನ ಅಂಶಗಳ ಬಗ್ಗೆ ಗಮನ ಹರಿಸುವುದು ಕಡ್ಡಾಯ.

1. ಸಂಘಟನಾ ಸ್ಥಳಕ್ಕೆ ಸಾರಿಗೆ ವ್ಯವಸ್ಥೆಯು ಇರುವುದು
2. ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು.
3. ವಿದ್ಯಾರ್ಥಿಗಳಿಗೆ ತಂಗಲು ವಸತಿ ವ್ಯವಸ್ಥೆ ಮಾಡುವುದು.
4. ಅಗತ್ಯ ಕ್ರೀಡೋಪಕರಣಗಳ ವ್ಯವಸ್ಥೆ
5. ಆಯಾ ಕ್ರೀಡೆಗಳ ನುರಿತ ಹಾಗೂ ಪರಿಣಿತ ಪರಿವೀಕ್ಷಕರಿರುವುದು.
6. ಕ್ರೀಡಾಂಕಣಗಳ ವ್ಯವಸ್ಥೆ.
7. ಪ್ರಥಮ ಚಿಕಿತ್ಸೆ ವ್ಯವಸ್ಥೆ ಮಾಡುವುದು.
8. ಕ್ರೀಡಾ ಪಟುಗಳ ಆಯ್ಕೆ ಸಮಿತಿ ರಚನೆ.
9. ನ್ಯಾಯನಿರ್ಣಾಯಕ ಸಮಿತಿ ರಚನೆ.

- **<u>ಹೋಬಳಿ/ಕ್ಲಷ್ಟರ್‌ಮಟ್ಟದಲ್ಲಿ ಸಂಘಟಿಸುವ ಕ್ರೀಡೆಗಳು</u>**

1] ಅಥ್ಲೆಟಿಕ್ಸ್ 2] ಕಬಡ್ಡಿ 3] ವಾಲಿಬಾಲ್ 4] ಖೋ-ಖೋ 5] ಥ್ರೋಬಾಲ್ 6] ಯೋಗ [ಹೆಚ್ಚು ತಂಡಗಳಿದ್ದಲ್ಲಿ ಮಾತ್ರ]

7] ಫುಟ್‌ಬಾಲ್ [ಹೆಚ್ಚು ತಂಡಗಳಿದ್ದಲ್ಲಿ]

**ಆಯ್ಕೆ ವಿಧಾನ:**

- ಹೋಬಳಿ/ಕ್ಲಷ್ಟರ್‌ಮಟ್ಟದಲ್ಲಿ ಯಾವುದೇ ಕ್ರೀಡೆಗಳಲ್ಲಿ ಆಯ್ಕೆ ಪ್ರಕ್ರಿಯೆ ಇರುವುದಿಲ್ಲ.
- ಗುಂಪು ಆಟಗಳಲ್ಲಿ ವಿಜೇತರಾಗಿ ಪ್ರಥಮ ಸ್ಥಾನ ಗಳಿಸಿದ ತಂಡವನ್ನು ಮುಂದಿನ ಹಂತಕ್ಕೆ ಕಳುಹಿಸುವುದು
- ಮೇಲಾಟ[ಅಥ್ಲೆಟಿಕ್ಸ್]ಗಳಲ್ಲಿ ಪ್ರಥಮ/ದ್ವಿತೀಯ ಸ್ಥಾನ ಗಳಿಸಿದ ಕ್ರೀಡಾಪಟುಗಳಿಗೆ ಮುಂದಿನ ಹಂತಕ್ಕೆ ಕಳುಹಿಸುವುದು

**ತಾಲ್ಲೂಕು ಮಟ್ಟದಲ್ಲಿ ಸಂಘಟಿಸುವ ಕ್ರೀಡೆಗಳು ಮತ್ತು ಆಯ್ಕೆ ವಿಧಾನ:**

1] ಅಥ್ಲೆಟಿಕ್ಸ್ 2] ಕಬಡ್ಡಿ 3] ವಾಲಿಬಾಲ್ 4] ಖೋ-ಖೋ 5] ಥ್ರೋಬಾಲ್ 6] ಯೋಗ [ಹೆಚ್ಚು ತಂಡಗಳಿದ್ದಲ್ಲಿ ಮಾತ್ರ]

7] ಬ್ಯಾಡ್ಮಿಂಟನ್ [ಹೆಚ್ಚು ತಂಡಗಳಿದ್ದಲ್ಲಿ ಮಾತ್ರ] 8] ಬಾಲ್ ಬ್ಯಾಡ್ಮಿಂಟನ್ [ಹೆಚ್ಚು ತಂಡಗಳಿದ್ದಲ್ಲಿ ಮಾತ್ರ]

**<u>ಆಯ್ಕೆ ವಿಧಾನ:</u>**

- **14 ವರ್ಷ ವಯೋಮಿತಿಯೊಳಗಿನ ಬಾಲಕ/ಬಾಲಕಿಯರಿಗೆ:** 6 ಮತ್ತು 7ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಯಾವುದಾದರೂ ಎರಡು ಗುಂಪು ಆಟಗಳಲ್ಲಿ ಹಾಗೂ ಮೇಲಾಟಗಳಲ್ಲಿ ರಿಲೇ ಹೊರತುಪಡಿಸಿ ಮೂರು ಸ್ಪರ್ಧೆಗಳಲ್ಲಿ ಮಾತ್ರ ಸ್ಪರ್ಧಿಸಲು ಅವಕಾಶ ನೀಡುವುದು. ಅಂತಿಮವಾಗಿ ಪ್ರಥಮ ಸ್ಥಾನ ಗಳಿಸಿದ ತಂಡದಿಂದ ಗರಿಷ್ಠ ಶೇಕಡ 70 ರಷ್ಟು ಕ್ರೀಡಾಪಟುಗಳನ್ನು ಮುಂದಿನ ಹಂತಕ್ಕೆ ಆಯ್ಕೆ ಮಾಡಿಕೊಳ್ಳುವುದು. 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಮತ್ತು ಪ್ರೌಢಶಾಲೆಗಳಲ್ಲಿನ [ಸರ್ಕಾರಿ/ಅನುದಾನಿತ/ ಅನುದಾನರಹಿತ ಶಾಲೆಗಳು] 14 ವರ್ಷ ವಯೋಮಿತಿಯೊಳಗಿನ ಬಾಲಕ/ಬಾಲಕಿಯರಿಗೆ ಪ್ರತಿ ಶಾಲೆಯಿಂದ ಎರಡು ಕ್ರೀಡಾಪಟುಗಳಿಗೆ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡಿ ತಂಡ ರಚನೆಗೆ ಅಗತ್ಯವಿರುವ ಗರಿಷ್ಟ ಶೇಕಡ 30 ರಷ್ಟು ಉತ್ತಮ ಕೌಶಲ್ಯ ಹೊಂದಿರುವ ಪ್ರತಿಭಾವಂತ ಕ್ರೀಡಾಪಟುಗಳನ್ನು ಆಯ್ಕೆ ಮಾಡುವ ಮೂಲಕ ತಂಡಗಳನ್ನು ರಚನೆ ಮಾಡಿ ಜಿಲ್ಲಾಮಟ್ಟಕ್ಕೆ ಕಳುಹಿಸುವುದು.
- **17 ವರ್ಷ ವಯೋಮಿತಿಯೊಳಗಿನ ಬಾಲಕ/ಬಾಲಕಿಯರಿಗೆ:** ಕ್ರೀಡಾಪಟುಗಳಿಗೆ ಯಾವುದಾದರೂ ಎರಡು ಗುಂಪು ಆಟಗಳಲ್ಲಿ ಹಾಗೂ ಮೇಲಾಗಳಲ್ಲಿ ರಿಲೇ ಹೊರತುಪಡಿಸಿ ಮೂರು ಸ್ಪರ್ಧೆಗಳಲ್ಲಿ ಮಾತ್ರ ಭಾಗವಹಿಸಲು ಅವಕಾಶ ನೀಡುವುದು. ಗುಂಪು ಆಟಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ವಿಜೇತರಾಗಿ ಪ್ರಥಮ ಸ್ಥಾನ ಪಡೆದ ತಂಡವನ್ನು ಮುಂದಿನ ಹಂತಕ್ಕೆ ಕಳುಹಿಸುವುದು. ಯಾವುದೇ ಆಯ್ಕೆ ಇರುವುದಿಲ್ಲ. ಮೇಲಾಟ[ಅಥ್ಲೆಟಿಕ್ಸ್]ಗಳಲ್ಲಿ ಪ್ರಥಮ/ದ್ವಿತೀಯ ಸ್ಥಾನ ಗಳಿಸಿದ ಕ್ರೀಡಾಪಟುಗಳಿಗೆ ಮುಂದಿನ ಹಂತಕ್ಕೆ ಕಳುಹಿಸುವುದು.

**ವಿಶೇಷ ಸೂಚನೆ:**

- **ಸ್ಕೂಲ್ ಗೇಮ್ ಫೆಡರೇಶನ್ ಆಫ್ ಇಂಡಿಯಾ ಸಂಸ್ಥೆಯು ರಾಷ್ಟ್ರಮಟ್ಟದಲ್ಲಿ ಆಯೋಜಿಸುವ ಕ್ರೀಡಾಕೂಟ/ಸ್ಪರ್ಧೆಗಳಲ್ಲಿ 5ನೇ ತರಗತಿ ಮಕ್ಕಳಿಗೆ ಅವಕಾಶ ನೀಡದೇ ಇರುವುದರಿಂದ ಯಾವ ಕಾರಣಕ್ಕೂ 5ನೇ ತರಗತಿಯ ಮಕ್ಕಳಿಗೆ ಯಾವುದೇ ಹಂತದಲ್ಲಿ ಸ್ಪರ್ಧಿಸಲು ಅವಕಾಶ ಇರುವುದಿಲ್ಲ.**
- 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಗುಂಪು ಆಟಗಳಲ್ಲಿ ಆಯ್ಕೆ ಮಾಡುವಾಗ ಕ್ರೀಡಾಪಟುಗಳು 6 ರಿಂದ 7ನೇ ತರಗತಿಯ ವಿದ್ಯಾರ್ಥಿ (ಕ್ರೀಡಾಪಟು) ಗಳಿಗಿಂತ ಹೆಚ್ಚು ಕೌಶಲ್ಯ ಹೊಂದಿರುವ ಪ್ರತಿಭಾವಂತ ಕ್ರೀಡಾಪಟುಗಳನ್ನು ಮಾತ್ರ ಆಯ್ಕೆ ಮಾಡುವುದು. ಸದರಿ ವಿದ್ಯಾರ್ಥಿಗಳು 14 ವರ್ಷ ವಯೋಮಿತಿ ಅಥವಾ 17 ವರ್ಷ ವಯೋಮಿತಿಯ ಯಾವುದಾದರೂ ಒಂದು ವಿಭಾಗದಲ್ಲಿ ಮಾತ್ರ ಭಾಗವಹಿಸಲು ಅವಕಾಶ ನೀಡುವುದು.
- ತಾಲ್ಲೂಕು ಮಟ್ಟದಲ್ಲಿ ನಡೆಸುವ ಆಟಗಳಾದ ಕಬಡ್ಡಿ , ಖೋ-ಖೋ, ವಾಲಿಬಾಲ್, ಥ್ರೋಬಾಲ್ ಆಟಗಳಲ್ಲಿ ಮಾತ್ರ 70:30 ರ ಅನುಪಾತದಲ್ಲಿ ಆಯ್ಕೆ ಮಾಡಿ ಜಿಲ್ಲಾಮಟ್ಟಕ್ಕೆ ತಂಡವನ್ನು ಕಳುಹಿಸುವುದು.
- ಯಾವುದೇ ಗಂಪು ಆಟಗಳಲ್ಲಿ ಕನಿಷ್ಠ ನಾಲ್ಕು ತಂಡಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ.
- ಬ್ಯಾಡ್ಮಿಂಟನ್/ಬಾಲ್‌ಬ್ಯಾಡ್ಮಿಂಟನ್ /ಯೋಗ ಮತ್ತು ಫುಟ್‌ಬಾಲ್ ಆಟಗಳಲ್ಲಿ ಹೆಚ್ಚು ತಂಡಗಳು ಇದ್ದಲ್ಲಿ ತಾಲ್ಲೂಕು ಮಟ್ಟದಲ್ಲಿ ಸ್ಪರ್ಧೆಗಳನ್ನು ಏರ್ಪಡಿಸಿ ಪ್ರಥಮ ಸ್ಥಾನ ಪಡೆದ ತಂಡವನ್ನು ಜಿಲ್ಲಾಮಟ್ಟಕ್ಕೆ ಕಳಹಿಸುವುದು.

[14 ಮತ್ತು 17 ವರ್ಷ ವಯೋಮಿತಿಯ ಬಾಲಕರ ತಂಡಗಳಿಗೆ ಸ್ಪರ್ಧೆ ನಡೆಸುವುದು ಮತ್ತು 17 ವರ್ಷ ವಯೋಮಿತಿಯ ಬಾಲಕಿಯರ ಫುಟ್‌ಬಾಲ್ ತಂಡವನ್ನು ಜಿಲ್ಲಾಮಟ್ಟದಲ್ಲಿ ಆಯ್ಕೆ ಮೂಲಕ ರಚಿಸುವುದು

**ಜಿಲ್ಲಾ ಮಟ್ಟದಲ್ಲಿ ಸಂಘಟಿಸುವ ಕ್ರೀಡೆಗಳು ಮತ್ತು ಆಯ್ಕೆ ವಿಧಾನ**

1] ಅಥ್ಲೆಟಿಕ್ಸ್ 2] ಥ್ರೋಬಾಲ್ 3] ಖೋ-ಖೋ 4] ಕಬಡ್ಡಿ 5] ಯೋಗ
6] ಬಾಲ್‌ಬ್ಯಾಡ್ಮಿಂಟನ್ 7] ವಾಲಿಬಾಲ್ 8] ಷಟಲ್ ಬ್ಯಾಡ್ಮಿಟನ್

**ನೇರವಾಗಿ ಜಿಲ್ಲಾಮಟ್ಟದಲ್ಲಿ ಸಂಘಟಿಸುವ ಕ್ರೀಡೆಗಳು**

1] ಫುಟ್‌ಬಾಲ್ 2] ಹಾಕಿ 3] ಕುಸ್ತಿ ] [14 ಮತ್ತು 17 ವರ್ಷ ವಯೋಮಿತಿಯ ಬಾಲಕರಿಗೆ ಫ್ರೀಸ್ಟೈಲ್ ಮತ್ತು ಗ್ರೀಕೋರೋಮನ್ ಹಾಗೂ 17 ವರ್ಷ ವಯೋಮಿತಿಯ ಬಾಲಕಿಯರಿಗೆ ಫ್ರೀಸ್ಟೈಲ್ ಕುಸ್ತಿ ಮಾತ್ರ] 4] ಈಜು ಮತ್ತು ಡೈವಿಂಗ್ 5] ಹ್ಯಾಂಡ್‌ಬಾಲ್ 6] ಬ್ಯಾಸ್ಕೆಟ್‌ಬಾಲ್ 7] ನೆಟ್‌ಬಾಲ್ 8] ಕ್ರಿಕೆಟ್ 9] ಜಿಮ್ನಾಸ್ಟಿಕ್ 10] ಕರಾಟೆ 11] ಜೂಡೋ 12] ಟೇಬಲ್ ಟೆನಿಸ್ 13] ಲಾನ್‌ಟೆನಿಸ್ 14] ಚೆಸ್

**ಆಯ್ಕೆ ವಿಧಾನ:** ಜಿಲ್ಲಾಮಟ್ಟದ ಗುಂಪು ಆಟಗಳಲ್ಲಿ ಮೊದಲ ಮತ್ತು ದ್ವಿತೀಯ ಸ್ಥಾನ ಪಡೆದ ತಂಡಗಳಿಂದ ಕೆಳಕಂಡಂತೆ ತಂಡಗಳನ್ನು ಆಯ್ಕೆ ಮಾಡಿ ಮುಂದಿನ ಹಂತಕ್ಕೆ ಕಳುಹಿಸುವುದು.

| ಕ್ರ.ಸಂ | ಕ್ರೀಡೆಗಳ ವಿವರ | ಮೊದಲ ಸ್ಥಾನ | ಎರಡನೆಯ ಸ್ಥಾನ | ಒಟ್ಟು | |
|---|---|---|---|---|---|
| 1 | ಕಬಡ್ಡಿ | 7 | 5 | 12 | |
| 2 | ಖೋ-ಖೋ | 9 | 3 | 12 | |
| 3 | ವಾಲಿಬಾಲ್ | 7 | 5 | 12 | |
| 4 | ಥ್ರೋ ಬಾಲ್ | 9 | 3 | 12 | |
| 5 | ಬಾಸ್ಕೆಟ್ ಬಾಲ್ | 7 | 5 | 12 | |
| 6 | ನೆಟ್ ಬಾಲ್ | 7 | 5 | 12 | |
| 7 | ಬಾಲ್ ಬ್ಯಾಡ್ಮಿಟನ್ | 5 | 3 | 8 | |
| 8 | ಲಾನ್ ಟೆನ್ನಿಸ್ | 3 | 2 | 5 | ರ್‍ಯಾಂಕಿಂಗ್ ಆಟಗಾರರು ಸೇರ್ಪಡೆ ಬಗ್ಗೆ ವಿಶೇಷ ಸೂಚನೆಯಲ್ಲಿ ತಿಳಿಸಿದೆ |
| 9 | ಟೇಬಲ್ ಟೆನ್ನಿಸ್ | 3 | 2 | 5 | |
| 10 | ಬ್ಯಾಡ್ಮಿಂಟನ್ [ಷಟ್ಲ್] | 3 | 2 | 5 | |
| 11 | ಹ್ಯಾಂಡ್ ಬಾಲ್ | 7 | 5 | 12 | |
| 12 | ಫುಟ್‌ಬಾಲ್ | 11 | 5 | 16 | |
| 13 | ಹಾಕಿ | 11 | 5 | 16 | |
| 14 | ಯೋಗ | ಅಂಕಗಳ ಆಧಾರದ ಮೇಲೆ [7 ಕ್ರೀಡಾಪಟುಗಳನ್ನು ಆಯ್ಕೆ ಮಾಡುವುದು] | | | |

| | | |
|---|---|---|
| 15 | ಚೆಸ್ | ಅಂಕಗಳ ಆಧಾರದ ಮೇಲೆ |
| 16 | ಕುಸ್ತಿ[ಫ್ರೀ ಸ್ಟೈಲ್/ಗ್ರಿಕೋರೋಮನ್] | ತೂಕದ ಆಧಾರದ ಮೇಲೆ ನಡೆಯುವ ಕ್ರೀಡೆಗಳಲ್ಲಿ ಪ್ರಥಮ ಸ್ಥಾನ ಪಡೆದ ಕ್ರೀಡಾಪಟುಗಳನ್ನು ಮಾತ್ರ ಆಯ್ಕೆ ಮಾಡುವುದು |
| 17 | ಕರಾಟೆ | |
| 18 | ಜೂಡೋ | |
| 19 | ಜಿಮ್ನಾಸ್ಟಿಕ್ | ಅಂಕಗಳ ಆಧಾರದ ಮೇಲೆ |
| 20 | ಈಜು ಮತ್ತು ಡೈವಿಂಗ್ | ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದಿರುವ ಕ್ರೀಡಾಪಟುಗಳನ್ನು ಮುಂದಿನ ಹಂತಕ್ಕೆ ಕಳುಹಿಸುವುದು |
| 21 | ಕ್ರಿಕೆಟ್ | ಪುಟ ಸಂಖ್ಯೆ –6ರಲ್ಲಿ ನೀಡಿರುವ ಮಾಹಿತಿಯಂತೆ ಆಯ್ಕೆ ಮಾಡಿ ತಂಡ ರಚಿಸುವುದು. |
| 22 | ಅಥ್ಲೆಟಿಕ್ಸ್ | 14 ಮತ್ತು 17 ವಯೋಮಿತಿಯೊಳಗಿನ ವಿಭಾಗಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ಕ್ರೀಡಾಪಟುಗಳನ್ನು ಆಯ್ಕೆ ಮಾಡುವುದು. 14 ವರ್ಷ ವಯೋಮಿತಿಯ 8ನೇ ತರಗತಿಯ ವಿದ್ಯಾರ್ಥಿಗಳು ಬಂದಲ್ಲಿ ಪ್ರತ್ಯೇಕವಾಗಿ ಅವರನ್ನು ಆಯ್ಕೆ ಮಾಡಿ 6 ರಿಂದ 7ನೇ ತರಗತಿಯ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ಕ್ರೀಡಾಪಟುಗಳಿಗಿಂತ ಉತ್ತಮ ಸಾಧನೆ ನೀಡುವಂತವರಿಗೆ 3ನೇ ಆಟಗಾರರಾಗಿ ಜಿಲ್ಲಾಮಟ್ಟದಿಂದ ರಾಜ್ಯ ಮಟ್ಟಕ್ಕೆ ಕಳುಹಿಸಬಹುದು. |

**ವಿಶೇಷ ಸೂಚನೆ: 1**] 14 ವರ್ಷ ವಯೋಮಿತಿಯೊಳಗಿನ ವಿಭಾಗದಲ್ಲಿ ಜಿಲ್ಲಾಮಟ್ಟದಲ್ಲಿ ನೇರವಾಗಿ ನಡೆಸುವ ಆಟಗಳಿಗೆ ತಾಲ್ಲೂಕು ಹಂತದಲ್ಲಿ ಕಬಡ್ಡಿ, ಖೋ–ಖೋ, ಥ್ರೋಬಾಲ್ ಮತ್ತು ವಾಲಿಬಾಲ್ ಆಟಗಳಿಗೆ ಆಯ್ಕೆ ಪ್ರಕ್ರಿಯೆಯಲ್ಲಿ ಅನುಸರಿಸುವ ಕ್ರಮದಂತೆ 70:30 ರ ಅನುಪಾತದಲ್ಲಿ ಆಯ್ಕೆ ಮಾಡಿ ತಂಡ ರಚಿಸುವುದು.

2] 14 ಮತ್ತು 17 ವರ್ಷ ವಯೋಮಿತಿಯ ಬಾಲಕರ ತಂಡಗಳಿಗೆ ಸ್ಪರ್ಧೆ ನಡೆಸುವುದು ಮತ್ತು 17 ವರ್ಷ ವಯೋಮಿತಿಯ ಬಾಲಕಿಯರ ಫುಟ್‌ಬಾಲ್ ತಂಡವನ್ನು ಜಿಲ್ಲಾಮಟ್ಟದಲ್ಲಿ ಆಯ್ಕೆ ಮೂಲಕ ರಚಿಸುವುದು.

- **ಯೋಗ** : ಈ ಸ್ಪರ್ಧೆಗಳಿಗೆ ಎಸ್.ಜಿ.ಎಫ್.ಐ.ನಿಯಮಗಳಲ್ಲಿ ರಾಷ್ಟ್ರಮಟ್ಟಕ್ಕೆ ರಿದಮಿಕ್ ಮತ್ತು ಆರ್ಟಿಸ್ಟಿಕ್ ಸೇರಿದಂತೆ ಒಟ್ಟು 7 ಕ್ರೀಡಾಪಟುಗಳ ತಂಡವನ್ನು ಆಯ್ಕೆ ಮಾಡಲು ಅವಕಾಶವಿರುವುದರಿಂದ, ಕಳೆದ ವರ್ಷದಂತೆ ಈ ಬಾರಿಯೂ ನಿಯಮಾನುಸಾರ 7 ಕ್ರೀಡಾಪಟುಗಳನ್ನು ಆಯ್ಕೆ ಮಾಡುವುದು.
- **ಜೂಡೋ** : 17 ವರ್ಷ ವಯೋಮಿತಿಯ ಬಾಲಕ/ಬಾಲಕಿಯರ ತಂಡಕ್ಕೆ ಎಸ್.ಜಿ.ಎಫ್.ಐ ನಿಯಮದಂತೆ 10 ತೂಕಗಳಲ್ಲಿ ಅಯ್ಕೆ ಮಾಡುವುದು. [8ನೇ ತೂಕದಲ್ಲಿ ಬಾಲಕರಿಗೆ +71 ಕೆ.ಜಿ ಮತ್ತು ಬಾಲಕಿಯರಿಗೆ +61 ಕೆ.ಜಿ.ತೂಕಗಳಲ್ಲಿ ಆಯ್ಕೆ ಮಾಡುವುದು]
- **ಕ್ರಿಕೆಟ್:** 14 ವರ್ಷ ವಯೋಮಿತಿಯ ಬಾಲಕರನ್ನು ಜಿಲ್ಲಾಮಟ್ಟದಲ್ಲಿ ಆಯ್ಕೆಮಾಡುವಾಗ 6 ರಿಂದ 7ನೇ ತರಗತಿಯವರೆಗೆ ಪ್ರತಿ ಶಾಲೆಯಿಂದ 4 ಆಟಗಾರರಿಗೆ ಭಾಗವಹಿಸಲು ಅವಕಾಶ ನೀಡುವುದು. [ಉನ್ನತೀಕರಿಸಿದ ಶಾಲೆಗಳಿದ್ದಲ್ಲಿ ಅಂತಹ ಶಾಲೆಗಳಿಂದ 6 ರಿಂದ 8ನೇ ತರಗತಿಯಿಂದ ಒಬ್ಬರಂತೆ ಒಟ್ಟು 4 ಆಟಗಾರರಿಗೆ ಅವಕಾಶ ನೀಡುವುದು]. ಪ್ರೌಢಶಾಲೆಯ 8ನೇ ತರಗತಿಯಿಂದ 14 ವರ್ಷ ವಯೋಮಿತಿಯೊಳಗಿನ ಒಬ್ಬರನ್ನು ಆಯ್ಕೆಗೆ ಕಳುಹಿಸಬಹುದು. ಆಯ್ಕೆ ಪ್ರಕ್ರಿಯೆಯ ನಂತರ ಕೆಳಕಂಡಂತೆ ತಂಡವನ್ನು ರಚನೆ ಮಾಡುವುದು.

| ಕ್ರ.ಸಂ | ಸ್ಥಾನಗಳ ವಿವರ [POSITION] | 6 ರಿಂದ 7ನೇ ತರಗತಿಗಳಿಂದ ಆಯ್ಕೆ | 8ನೇ ತರಗತಿಯಿಂದ ಆಯ್ಕೆ |
|---|---|---|---|
| 1 | ಆರಂಭಿಕ ಆಟಗಾರರು [OPENING BATSMAN] | 3 | 1 |
| 2 | ಆಲ್ ರೌಂಡರ್ [ALL ROUNDER] | 3 | 1 |
| 3 | ಮೀಡಿಯಂ ಪೇಸ್ ಬೌಲರ್ [MEDIUM PACE BOWLER] | 3 | 1 |
| 4 | ಸ್ಪಿನ್ನರ್ಸ್ [SPINNER] | 1 | 1 |
| 5 | ವಿಕೆಟ್ ಕೀಪರ್ [WICKET KEEPER] | 1 | 1 |
| | ಒಟ್ಟು | 11 | 5 |

16 ವರ್ಷ ವಯೋಮಿತಿಯ ಕ್ರೀಡಾಪಟುಗಳನ್ನು ಆಯ್ಕೆ ಮಾಡುವಾಗ ಪ್ರತಿ ಪ್ರೌಢಶಾಲೆಯಿಂದ 8 ರಿಂದ 10 ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ 4 ಕ್ರೀಡಾಪಟುಗಳನ್ನು ಆಯ್ಕೆ ಮಾಡಿ ಜಿಲ್ಲಾಮಟ್ಟದ ಆಯ್ಕೆಗೆ ಕಳುಹಿಸುವುದು. ಜಿಲ್ಲಾಮಟ್ಟದಲ್ಲಿ ಸಂಘಟನಾಕಾರರು ಕ್ರೀಡಾಪಟುಗಳ ನೋಂದಣಿಯ ನಂತರ ಸದರಿ ಕ್ರೀಡಾಪಟುಗಳು ಯಾವ ಸ್ಥಾನಗಳಲ್ಲಿ [POSITION] ಪರಿಣಿತಿ ಹೊಂದಿರುತ್ತಾರೊ, ಆ ಸ್ಥಾನಗಳಿಗೆ ಪ್ರತಿಭೆಯನ್ನಾಧರಿಸಿ ನಿಯಮಾನುಸಾರ ಆಯ್ಕೆ ಮಾಡಿ ಕೆಳಕಂಡಂತೆ ತಂಡವನ್ನು ರಚನೆ ಮಾಡುವುದು.

| ಕ್ರ.ಸಂ | ಸ್ಥಾನಗಳ ವಿವರ [POSITION] | 8 ರಿಂದ 10ನೇ ತರಗತಿಯವರೆಗೆ 16 ವರ್ಷ ವಯೋಮಿತಿಯ ಕ್ರೀಡಾಪಟುಗಳ ಆಯ್ಕೆ |
|---|---|---|
| 1 | ಆರಂಭಿಕ ಆಟಗಾರರು [OPENING BATSMAN] | 4 |
| 2 | ಆಲ್ ರೌಂಡರ್ [ALL ROUNDER] | 4 |
| 3 | ಮೀಡಿಯಂ ಪೇಸ್ ಬೌಲರ್ [MEDIUM PACE BOWLER] | 4 |
| 4 | ಸ್ಪಿನ್ನರ್ಸ್ [SPINNER] | 2 |
| 5 | ವಿಕೆಟ್ ಕೀಪರ್ [WICKET KEEPER] | 2 |
| | ಒಟ್ಟು | 16 |

**ಕ್ರಿಕೆಟ್ ಕ್ರೀಡಾಪಟುಗಳ ಆಯ್ಕೆ:- [ವಿಭಾಗ ಮತ್ತು ರಾಜ್ಯಮಟ್ಟದ ಆಯ್ಕೆ]**

ಕ್ರಿಕೆಟ್ ತಂಡವನ್ನು ರಚನೆ ಮಾಡುವಾಗ ಕೆಳಕಂಡಂತೆ ಆಯ್ಕೆ ಮಾಡುವುದು.

| ಕ್ರ.ಸಂ | ಆಟಗಾರರು | ಪ್ರಥಮ ಸ್ಥಾನದಿಂದ | ದ್ವಿತೀಯ ಸ್ಥಾನದಿಂದ |
|---|---|---|---|
| 1 | ಆರಂಭಿಕ ಆಟಗಾರರು | 3 | 1 |
| 2 | ಆಲ್ ರೌಂಡರ್ | 3 | 1 |
| 3 | ಮೀಡಿಯಂ ಪೇಸ್ ಬೌಲರ್ | 3 | 1 |
| 4 | ಸ್ಪಿನ್ನರ್ಸ್ | 1 | 1 |
| 5 | ವಿಕೇಟ್ ಕೀಪರ್ | 1 | 1 |
| | ಒಟ್ಟು | 11 | 5 |

- ಪ್ರಾರಂಭಿಕ ಬ್ಯಾಟ್ಸ್‌ಮನ್ ಆಯ್ಕೆ ಮಾಡುವಾಗ ಪೂರ್ಣ ಕೌಶಲ್ಯ ಹೊಂದಿರುವ ಇಬ್ಬರು ಆಟಗಾರರನ್ನು ಆಯ್ಕೆ ಮಾಡುವುದು. ಎಡಗೈ ಬ್ಯಾಟ್ಸ್‌ಮನ್ ಇದ್ದಲ್ಲಿ ಆದ್ಯತೆ ನೀಡುವುದು)
- ಹೆಚ್ಚುವರಿ ಇಬ್ಬರನ್ನು ಆಯ್ಕೆ ಮಾಡುವಾಗ ವಿಕೆಟ್ ಕೀಪರ್ ಅಥವಾ ಬೌಲರ್‌ಗಳನ್ನು ಪರಿಗಣಿಸುವುದು.
- ಸ್ಪಿನ್ ಬೌಲರ್‌ಗಳಲ್ಲಿ ಒಬ್ಬರು ಲೆಗ್‌ಸ್ಪಿನ್ನರ್ ಮತ್ತು ಒಬ್ಬರು ಆಫ್‌ಸ್ಪಿನ್ನರ್‌ಗಳನ್ನು ಆಯ್ಕೆ ಮಾಡುವುದು. ಎಡಗೈ ಆಟಗಾರರಿದ್ದಲ್ಲಿ ಹೆಚ್ಚಿನ ಕೌಶಲ್ಯ ಹೊಂದಿದಲ್ಲಿ ಮಾತ್ರ ಪರಿಗಣಿಸುವುದು.
- ಕ್ರಿಕೇಟ್ ಆಯ್ಕೆ ವಿಧಾನ:- ವಿಭಾಗಮಟ್ಟದಲ್ಲಿ "ನಾಕ್‌ಔಟ್" ಮಾದರಿಯಲ್ಲಿ ಪಂದ್ಯಾಟವನ್ನು ನಡೆಸಿ ತಂಡವನ್ನು ಆಯ್ಕೆ ಮಾಡಲು ಶಿಫಾರಸ್ಸು ಮಾಡಲಾಗಿದೆ. ಜಿಲ್ಲೆಯಲ್ಲಿ ಸಾಕಷ್ಟು ತಂಡಗಳು ಲಭ್ಯವಿಲ್ಲದಿದಲ್ಲಿ ಆಯ್ಕೆ ಟ್ರಯಲ್ಸ್ ಮಾಡಿ ಮುಂದಿನ ಹಂತಕ್ಕೆ ಕಳುಹಿಸುವುದು.
- ಕ್ರಿಕೆಟ್ ಸ್ಪರ್ಧೆ ನಡೆಸುವ ಬಗ್ಗೆ:- ವಿಭಾಗ/ರಾಜ್ಯಮಟ್ಟದಲ್ಲಿ ಕನಿಷ್ಟ 15 ಓವರ್‌ಗಳು ಗರಿಷ್ಟ 20 ಓವರ್‌ಗಳ ಪಂದ್ಯಾಟವನ್ನು ನಡೆಸುವಂತೆ ತೀರ್ಮಾನಿಸಲಾಯಿತು. ಒಬ್ಬ ಬೌಲರ್‌ಗೆ 1/5 ಓವರ್‌ಗಳ ಬೌಲಿಂಗ್ ಮಾಡಲು ಅವಕಾಶ ಕಲ್ಪಿಸಬಹುದು. [Total numbers of overs devided by 5] ಕರ್ನಾಟಕ ರಾಜ್ಯ ಕ್ರಿಕೇಟ್ ಅಸೋಸಿಯೇಷನ್ [K.S.C.A] ಸಂಸ್ಥೆಯು ಅಳವಡಿಸಿಕೊಂಡಿರುವ ನಿಯಮಗಳನ್ನು ಅನುಸರಿಸುವಂತೆ [One day International Rules] ಹಾಗೂ ಸದರಿ ಸಂಸ್ಥೆಯು ಮನ್ನಣೆ ಮಾಡಿರುವ ಸ್ಕೋರ್‌ಶೀಟನ್ನು ಉಪಯೋಗಿಸುವುದು.

**ಆಯ್ಕೆ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಸಾಮಾನ್ಯ ನಿಯಮಗಳು**

ಪ್ರತಿ ಹಂತದಲ್ಲಿ ಪ್ರತ್ಯೇಕವಾದ ಆಯ್ಕೆ ಸಮಿತಿಯನ್ನು ರಚಿಸಿ ಸದರಿ ಆಯ್ಕೆ ಸಮಿತಿಯು ಪಂದ್ಯಗಳನ್ನು ವೀಕ್ಷಿಸಿ ಆಟಗಾರರನ್ನು ಆಯ್ಕೆ ಮಾಡುವುದು.

ಆಯ್ಕೆಗೆ ಕ್ರೀಡಾಪಟುಗಳ ಕೌಶಲ್ಯ ಮತ್ತು ಪ್ರತಿಭೆಯನ್ನು ಮಾನದಂಡವಾಗಿರಿಸಿಕೊಂಡು ಆಯ್ಕೆ ಟ್ರಯಲ್ಸ್‌ನ್ನು ನಡೆಸುವುದು.

- ಒಬ್ಬ ಕ್ರೀಡಾಪಟುವು ಎರಡು ಗುಂಪು ಆಟಗಳಲ್ಲಿ ಭಾಗವಹಿಸಲು ಅವಕಾಶ ನೀಡುವುದು.
- ಕ್ರೀಡಾಪಟುಗಳನ್ನು ಆಯ್ಕೆ ಮಾಡುವಾಗ ಆಯಾ ಆಟಗಳಿಗೆ ಬೇಕಾಗುವ ಪೊಜಿಷನ್‌ಗಳಿಗೆ ತಕ್ಕಂತೆ ಆಯ್ಕೆ ಮಾಡುವುದು [ಉದಾ: ಖೋ-ಖೋ, ಡಾಡ್ಜರ್, ಚೇಝರ್, ಆಲ್ ರೌಂಡರ್, ಹಾಕಿ/ಫುಟ್‌ಬಾಲ್, ಫಾರ್ವರ್ಡ್, ಹಾಫ್‌ಬ್ಯಾಕ್,ಫುಲ್ ಬ್ಯಾಕ್, ಗೋಲ್ ಕೀಪರ್ ಇತ್ಯಾದಿ]
- ಈ ರೀತಿ ಆಯ್ಕೆಯಾದ ತಂಡಗಳಿಗೆ ಆಯಾ ಹಂತದಲ್ಲಿ ಕಡ್ಡಾಯವಾಗಿ ತರಬೇತಿ ಶಿಬಿರಗಳನ್ನು ನಡೆಸುವುದು.
- ಆಯ್ಕೆ ಪಟ್ಟಿಯನ್ನು ಆಯ್ಕೆದಾರರು ರ್‍ಯಾಂಕಿಂಗ್ ಆಧಾರವಾಗಿಟ್ಟುಕೊಂಡು ಆಟವಾಡುವ ಆಟಗಾರರ ಕ್ರಮಾಂಕ ನೀಡಿ ಧೃಡೀಕರಿಸುವುದು.
- ಅಥ್ಲೆಟಿಕ್ಸ್ ವಿಭಾಗದಲ್ಲಿ ಒಬ್ಬ ಕ್ರೀಡಾಪಟುವು ರಿಲೇ ಹೊರತುಪಡಿಸಿ ಮೂರು ಸ್ಪರ್ಧೆಗಳಲ್ಲಿ ಭಾಗವಹಿಸಬಹುದು.

**ರಾಜ್ಯಮಟ್ಟದಲ್ಲಿ ಸಂಘಟಿಸುವ ಕ್ರೀಡೆಗಳು**

| | | | | | | | | | |
|---|---|---|---|---|---|---|---|---|---|
| 1 | ಕಬಡ್ಡಿ | 2 | ಖೋ-ಖೋ | 3 | ವಾಲಿಬಾಲ್ | 4 | ಥ್ರೋಬಾಲ್ | 5 | ಬ್ಯಾಸ್ಕೆಟ್ ಬಾಲ್ |
| 6 | ನೆಟ್‌ಬಾಲ್ | 7 | ಬಾಲ್‌ಬ್ಯಾಡ್ಮಿಂಟನ್ | 8 | ಲಾನ್‌ಟೆನಿಸ್ | 9 | ಟೇಬಲ್ ಟೆನಿಸ್ | 10 | ಬ್ಯಾಡ್ಮಿಂಟನ್ |
| 11 | ಫುಟ್‌ಬಾಲ್[14 ವರ್ಷ ವಯೋಮಿತಿಯ ಬಾಲಕರಿಗೆ ಮತ್ತು 17 ವರ್ಷ ವಯೋಮಿತಿಯ ಬಾಲಕ/ ಬಾಲಕಿಯರಿಗೆ] | | | | | | | | |
| 12 | ಹ್ಯಾಂಡ್‌ಬಾಲ್ | 13 | ಹಾಕಿ | 14 | ಯೋಗ | 15 | ಚೆಸ್ | 16 | ಕರಾಟೆ |
| 17 | ಕುಸ್ತಿ [14 ಮತ್ತು 17 ವರ್ಷ ವಯೋಮಿತಿಯ ಬಾಲಕರಿಗೆ ಫ್ರೀಸ್ಟೈಲ್ ಮತ್ತು ಗ್ರೀಕೋರೋಮನ್ ಹಾಗೂ 17 ವರ್ಷ ವಯೋಮಿತಿಯ ಬಾಲಕಿಯರಿಗೆ ಫ್ರೀ ಸ್ಟೈಲ್ ಕುಸ್ತಿ ಮಾತ್ರ] | | | | | | | | |
| 18 | ಜೂಡೋ | 19 | ಜಿಮ್ನಾಸ್ಟಿಕ್ | 20 | ಈಜು ಮತ್ತು ಡೈವಿಂಗ್ | 21 | ಕ್ರಿಕೆಟ್ | 22 | ಅಥ್ಲೆಟಿಕ್ಸ್ |
| 23 | ಸ್ಕೇಟಿಂಗ್ [ರ್‍ಯಾಂಕಿಂಗ್ ಆಧಾರದ ಮೇಲೆ ಆಯ್ಕೆ] | 24 | ವಿಶೇಷ ಚೇತನ ಮಕ್ಕಳಿಗೆ ಅಥ್ಲೆಟಿಕ್ಸ್ | | | | | | |

**ಸ್ಕೂಲ್ ಗೇಮ್ ಫೆಡರೇಶನ್ ಆಫ್ ಇಂಡಿಯಾ ಸಂಸ್ಥೆಯು ರಾಷ್ಟ್ರಮಟ್ಟದಲ್ಲಿ ನಡೆಸುವ ಕ್ರೀಡಾಕೂಟಗಳಿಗೆ ರಾಜ್ಯದಿಂದ ಕೆಳಕಂಡ ಕ್ರೀಡೆಗಳಿಗೆ ತಂಡಗಳನ್ನು ಕಳುಹಿಸಲಾಗುತ್ತದೆ.**

| | | | | | | | | | |
|---|---|---|---|---|---|---|---|---|---|
| 1 | ಕಬಡ್ಡಿ | 2 | ಖೋ-ಖೋ | 3 | ವಾಲಿಬಾಲ್ | 4 | ಥ್ರೋಬಾಲ್ | 5 | ಬ್ಯಾಸ್ಕೆಟ್ ಬಾಲ್ |
| 6 | ನೆಟ್‌ಬಾಲ್ | 7 | ಬಾಲ್‌ಬ್ಯಾಡ್ಮಿಂಟನ್ | 8 | ಲಾನ್‌ಟೆನಿಸ್ | 9 | ಟೇಬಲ್ ಟೆನಿಸ್ | 10 | ಬ್ಯಾಡ್ಮಿಂಟನ್ |
| 11 | ಫುಟ್‌ಬಾಲ್[14 ವರ್ಷ ವಯೋಮಿತಿಯ ಬಾಲಕರಿಗೆ ಮತ್ತು 17 ವರ್ಷ ವಯೋಮಿತಿಯ ಬಾಲಕ/ ಬಾಲಕಿಯರಿಗೆ] | | | | | | | | |
| 12 | ಹ್ಯಾಂಡ್‌ಬಾಲ್ | 13 | ಹಾಕಿ | 14 | ಯೋಗ | 15 | ಚೆಸ್ | 16 | ಕರಾಟೆ |
| 17 | ಕುಸ್ತಿ [14 ಮತ್ತು 17 ವರ್ಷ ವಯೋಮಿತಿಯ ಬಾಲಕರಿಗೆ ಫ್ರೀಸ್ಟೈಲ್ ಮತ್ತು ಗ್ರೀಕೋರೋಮನ್ ಹಾಗೂ 17 ವರ್ಷ ವಯೋಮಿತಿಯ ಬಾಲಕಿಯರಿಗೆ ಫ್ರೀ ಸ್ಟೈಲ್ ಕುಸ್ತಿ ಮಾತ್ರ] | | | | | | | | |
| 18 | ಜೂಡೋ | 19 | ಜಿಮ್ನಾಸ್ಟಿಕ್ | 20 | ಈಜು ಮತ್ತು ಡೈವಿಂಗ್ | 21 | ಕ್ರಿಕೆಟ್ | 22 | ಅಥ್ಲೆಟಿಕ್ಸ್ |
| 23 | ಸ್ಕೇಟಿಂಗ್ | | | | | | | | |

- **ಅಥ್ಲೆಟಿಕ್ಸ್ ಮತ್ತು ಈಜು ಸ್ಪರ್ಧೆಗಳಲ್ಲಿ ರಿಲೇ ತಂಡಗಳನ್ನು ಆಯ್ಕೆ ಮಾಡುವಾಗ ಸ್ಟಾಂಡ್ ಬೈ [ಕಾಯ್ದಿರಿಸಿದ ಆಟಗಾರರು] ಕ್ರೀಡಾಪಟುಗಳನ್ನು ಕಡ್ಡಾಯವಾಗಿ ಆಯ್ಕೆ ಮಾಡಿ ಕಳುಹಿಸುವುದು.**
- ವಲಯ ಹಂತದಿಂದ ಆಯ್ಕೆಯಾದ ತಂಡದ ಗುಂಪು ಭಾವಚಿತ್ರವನ್ನು ಸಂಬಂಧಿಸಿದ ಶಾಲೆಗಳ ದೈಹಿಕ ಶಿಕ್ಷಣ ಶಿಕ್ಷಕರು/ಮೇಲ್ವಿಚಾರಕರೊಂದಿಗೆ ಕಡ್ಡಾಯವಾಗಿ ತೆಗೆಸಿ ಮುಂದಿನ ಹಂತಕ್ಕೆ ಕಳುಹಿಸುವುದು.
- ರಾಜ್ಯಮಟ್ಟದಿಂದ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗುವ ಕ್ರೀಡಾಪಟುಗಳಿಗೆ ಆಯಾ ಜಿಲ್ಲೆಗಳ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು/ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರು ಜಿಲ್ಲಾ ವೈದ್ಯಾಧಿಕಾರಿಗಳಿಂದ ವೈದ್ಯಕೀಯ ತಪಾಸಣೆಯನ್ನು ಮಾಡಿಸಿ, ವೈದ್ಯಕೀಯ ಪ್ರಮಾಣ ಪತ್ರವನ್ನು ಎಲಿಜಿಬಿಲಿಟಿ ಸರ್ಟಿಫಿಕೇಟಿನೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.

**ಕ್ರಮ: ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರು/ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು**

15. ಎಲಿಜಿಬಿಲಿಟಿ ಸರ್ಟಿಫಿಕೇಟ್ [ELIGIBILITY CERTIFICATE]

ರಾಜ್ಯ ಮಟ್ಟದಲ್ಲಿ ವಿಜೇತರಾಗಿ ರಾಷ್ಟ್ರ ಮಟ್ಟದಲ್ಲಿ ಭಾಗವಹಿಸುವಂತಹ ಕ್ರೀಡಾಪಟುಗಳ ಮಾಹಿತಿಗಳನ್ನು ಆನ್‌ಲೈನ್ ಮುಖಾಂತರ ಎಸ್.ಜಿ.ಎಫ್.ಐ ಸಂಸ್ಥೆಗೆ ಕಳುಹಿಸಬೇಕಾಗಿರುವುದರಿಂದ ನಿಖರವಾದ ಮಾಹಿತಿಗಳನ್ನು ಕಳುಹಿಸಬೇಕಾಗಿರುತ್ತದೆ. ಆದುದರಿಂದ ಈ ಬಗ್ಗೆ ಎಲ್ಲಾ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು ವೈಯಕ್ತಿಕ ಗಮನ ಹರಿಸಿ ಆಯಾ ತಾಲ್ಲೂಕು ಮಟ್ಟದ ದೈಹಿಕ ಶಿಕ್ಷಣ ಪರಿವೀಕ್ಷಕರುಗಳಿಗೆ ಈ ಬಗ್ಗೆ ಸೂಕ್ತ ತಿಳುವಳಿಕೆ ನೀಡಿ ದೈಹಿಕ ಶಿಕ್ಷಣ ಪರಿವೀಕ್ಷಕರು ತಮ್ಮ ತಾಲ್ಲೂಕುಗಳಲ್ಲಿನ ವಿಜೇತರಾದ ಶಾಲಾ ಮಕ್ಕಳ ನಿಖರವಾದ ಮಾಹಿತಿಯನ್ನು ನೀಡುವಾಗ ಕೆಳಕಂಡ ಅಂಶಗಳನ್ನು ಮುಖ್ಯ ಶಿಕ್ಷಕರ ಗಮನಕ್ಕೆ ತಂದು ಮಾಹಿತಿಯನ್ನು ನೀಡುವಂತೆ ಎಲ್ಲಾ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳಿಗೆ ತಿಳಿಸಲಾಯಿತು.

- ಪರಿಷ್ಕೃತ ಎಲಿಜಿಬಿಲಿಟಿ ಸರ್ಟಿಫಿಕೇಟ್[ELIGIBILITY CERTIFICATE]ನ್ನೇ ಕಡ್ಡಾಯವಾಗಿ ಉಪಯೋಗಿಸತಕ್ಕದ್ದು.
- ವಿದ್ಯಾರ್ಥಿಯ ಯೂಡೈಸ್ ಕೋಡ್[U DISE CODE] ,ಸ್ಟೂಡೆಂಟ್ ಅಚೀವ್‌ಮೆಂಟ್ ಟ್ರಾಕಿಂಗ್ ಸಿಸ್ಟಮ್ ಸಂಖ್ಯೆ [STUDENT ACHEIVMENT TRACKING SYSTEM ] ಮತ್ತು ಆಧಾರ್ ಸಂಖ್ಯೆಯನ್ನು [ADHAR NO ] ಕಡ್ಡಾಯವಾಗಿ ನಮೂದಿಸುವುದು [ಶಾಲಾ ಮುಖ್ಯೋಪಾಧ್ಯಾಯರಿಂದ ದೃಢೀಕರಿಸಿದ ಆಧಾರ್ ಕಾರ್ಡ್ ಪ್ರತಿ ಲಗತ್ತಿಸುವುದು]
- ಗುರುತಿನ ಪತ್ರದೊಂದಿಗೆ ಹಿಂದಿನ ಸಾಲಿನ ಅಂಕಪಟ್ಟಿಯನ್ನು [PROGRESS CARD] ಕಡ್ಡಾಯವಾಗಿ ಲಗತ್ತಿಸುವುದು.
- ಭಾವಚಿತ್ರದೊಂದಿಗೆ ಎಲಿಜಿಬಿಲಿಟಿ ಸರ್ಟಿಫಿಕೇಟ್[ELIGIBILITY CERTIFICATE] 04 ಅಳತೆಯಲ್ಲಿ ಇರಬೇಕು.
- ಎಲಿಜಿಬಿಲಿಟಿ ಸರ್ಟಿಫಿಕೇಟ್[ELIGIBILITY CERTIFICATE] ನಲ್ಲಿ ಕ್ರೀಡಾಪಟುವಿನ ಭಾವಚಿತ್ರದ ಕೆಳಗೆ ಶಾಲೆಯ ಮೊಹರು ಹಾಗೂ ಮುಖ್ಯ ಶಿಕ್ಷಕರ ಸಹಿ ನಮೂದಿಸಬೇಕು. ರಾಷ್ಟ್ರಮಟ್ಟದ ಕ್ರೀಡಾಸ್ಪರ್ಧೆಗಳು ಬೇರೆ,ಬೇರೆ ರಾಜ್ಯಗಳಲ್ಲಿ ನಡೆಯುವುದರಿಂದ ಕಡ್ಡಾಯವಾಗಿ ಆಂಗ್ಲಭಾಷೆಯ ಮೊಹರನ್ನೇ [SEAL] ಉಪಯೋಗಿಸುವುದು.
- ಶಾಲೆಯ ಮೊಹರು ಮತ್ತು ಶಾಲಾ ಮುಖ್ಯಸ್ಥರ ಸಹಿಯನ್ನು ಕ್ರೀಡಾಪಟುಗಳ ಭಾವಚಿತ್ರದ ಕೆಳಭಾಗದಲ್ಲಿ ನಮೂದಿಸುವುದು. ಯಾವುದೇ ಕಾರಣಕ್ಕೂ ಭಾವಚಿತ್ರದ ಮೇಲೆ [ಮುಖದ ಮೇಲೆ] ನಮೂದಿಸಬಾರದು.
- ಎಲಿಜಿಬಿಲಿಟಿ ಸರ್ಟಿಫಿಕೇಟ್ [ELIGIBILITY CERTIFICATE] ನಲ್ಲಿ ಕ್ರೀಡಾಪಟುವಿನ ಹೆಸರು, ಶಾಲಾ ವಿಳಾಸ, ಹುಟ್ಟಿದ ದಿನಾಂಕ, ದಾಖಲಾತಿ ಸಂಖ್ಯೆ ನಮೂದಿಸುವಾಗ ದಾಖಲೆಗಳನ್ನು ಪರಿಶೀಲಿಸಿ ತಪ್ಪಿಲ್ಲದಂತೆ ದಪ್ಪ ಅಕ್ಷರಗಳಲ್ಲಿ [BLOCK LETTER] ಆಂಗ್ಲ ಭಾಷೆಯಲ್ಲಿ ಬರೆಯಬೇಕು.
- ಸಂಬಂಧಿಸಿದ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರು ಶಾಲೆಯಲ್ಲಿರುವ ದಾಖಲೆಗಳನ್ವಯ ಭರ್ತಿ ಮಾಡುವುದು. ಯಾವುದೇ ಕಾರಣಕ್ಕೂ ಎಲಿಜಿಬಿಲಿಟಿ ಸರ್ಟಿಫಿಕೇಟ್[ELIGIBILITY CERTIFICATE]ನ್ನು ಕ್ರೀಡಾಪಟುಗಳಿಂದ ಭರ್ತಿ ಮಾಡಿಸತಕ್ಕದ್ದಲ್ಲ.
- ಎಲಿಜಿಬಿಲಿಟಿ ಸರ್ಟಿಫಿಕೇಟ್[ELIGIBILITY CERTIFICATE]ನ್ನು ದೃಢೀಕರಿಸುವಾಗ **ವಿದ್ಯಾರ್ಥಿಯ ಸಹಿ, ಪೋಷಕರ ಸಹಿ/ದೂರವಾಣಿ/ಮೊಬೈಲ್ ಸಂಖ್ಯೆ ಮತ್ತು ಇ-ಮೇಲ್ ವಿಳಾಸ** ನಮೂದಿಸಿರುವ ಬಗ್ಗೆ ಕಡ್ಡಾಯವಾಗಿ ಪರಿಶೀಲಿಸಬೇಕು.
- ರಾಷ್ಟ್ರಮಟ್ಟದ ಕ್ರೀಡಾಕೂಟಗಳ ಬಗ್ಗೆ ಮಾಹಿತಿಗಳನ್ನು ಸಕಾಲದಲ್ಲಿ ನೀಡಲು ಎಲಿಜಿಬಿಲಿಟಿ ಸರ್ಟಿಫಿಕೇಟ್ [ELIGIBILITY CERTIFICATE]ಗಳಲ್ಲಿ ಶಾಲೆಗಳ/ಕ್ರೀಡಾಪಟುಗಳ ಮತ್ತು ಪೋಷಕರ ವಿಳಾಸ/ದೂರವಾಣಿ ಸಂಖ್ಯೆ /ಈ ಮೈಲ್ ವಿಳಾಸಗಳನ್ನು ಕಡ್ಡಾಯವಾಗಿ ನಮೂದಿಸುವುದು.
- ಕ್ರೀಡಾಪಟುಗಳ ಎತ್ತರ,ತೂಕ, ಎದೆಅಳತೆ ಮತ್ತು **ಟ್ರ್ಯಾಕ್‌ಸೂಟ್ ಹಾಗೂ ಷೂಗಳ ಅಳತೆ** ಇವುಗಳನ್ನು ನಿಖರವಾಗಿ ಮತ್ತು ತಪ್ಪದೇ ನಮೂದಿಸುವುದು.
- ಎಲಿಜಿಬಿಲಿಟಿ ಸರ್ಟಿಫಿಕೇಟ್ [ELIGIBILITY CERTIFICATE]ಲ್ಲಿ ನಿಗಧಿಪಡಿಸಿರುವ ಸ್ಥಳದಲ್ಲಿಯೇ ಶಾಲಾ ಮುಖ್ಯಶಿಕ್ಷಕರು, ಸಹಿ ಹಾಗೂ ಮೊಹರಿನೊಂದಿಗೆ ಧೃಡೀಕರಿಸಬೇಕು.
- ರಾಜ್ಯಮಟ್ಟದಿಂದ ರಾಷ್ಟ್ರಮಟ್ಟಕ್ಕೆ ಅರ್ಹರಾದ ಕ್ರೀಡಾಪಟುಗಳ ಎಲಿಜಿಬಿಲಿಟಿ ಸರ್ಟಿಫಿಕೇಟ್ [ELIGIBILITY CERTIFICATE] ನೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿ ಹಾಗೂ ಜನನ ಪ್ರಮಾಣ ಪತ್ರದ ಪ್ರತಿಗಳನ್ನು ಶಾಲಾ ಮುಖ್ಯ ಶಿಕ್ಷಕರು ದೃಢೀಕರಿಸಿ ಸಲ್ಲಿಸುವುದು.

- ರಾಜ್ಯಮಟ್ಟ ಮತ್ತು ರಾಷ್ಟ್ರಮಟ್ಟದ ಕ್ರೀಡಾಸ್ಪರ್ಧೆಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ನೀಡಲು ಸಲ್ಲಿಸುವ ನಗದು ಬಹುಮಾನದ ಅರ್ಜಿಗಳಲ್ಲಿ ವಿದ್ಯಾರ್ಥಿಗಳ ಯೂನಿಕ್ ಡೈಸ್‌ಕೋಡ್ ನಂಬರ್‌ನ್ನು ಮತ್ತು ಆಧಾರ್ ಸಂಖ್ಯೆ ಹಾಗೂ ಬ್ಯಾಂಕ್ ಖಾತೆಯ ಸಂಖ್ಯೆ, ಬ್ಯಾಂಕಿನ ಹೆಸರು ಮತ್ತು ಐ.ಎಫ್.ಎಸ್.ಸಿ. [IFSC] ಕೋಡ್‌ಗಳನ್ನು ಕಡ್ಡಾಯವಾಗಿ ನಮೂದಿಸುವುದು.

**ಕ್ರಮ: ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರು/ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳ**

**16. ರಾಜ್ಯಮಟ್ಟದಲ್ಲಿ ವಿಜೇತರಾದ ಕ್ರೀಡಾಪಟುಗಳ ಪಟ್ಟಿಯನ್ನು ತಯಾರಿಸುವ ಬಗ್ಗೆ:**

ರಾಜ್ಯಮಟ್ಟದ ಕ್ರೀಡಾಸ್ಪರ್ಧೆಗಳನ್ನು ಆಯೋಜಿಸುವ ಜಿಲ್ಲೆಗಳ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು ಸಂಘಟನಾ ದಿನಾಂಕದ ಬಗ್ಗೆ ಕನಿಷ್ಠ ಒಂದು ವಾರ ಮುನ್ನ ಸುತ್ತೋಲೆಯನ್ನು ಹೊರಡಿಸಲು ಹಾಗೂ ವಿಭಾಗಮಟ್ಟದಲ್ಲಿ ಆಟೋಟಗಳನ್ನು ಸಂಘಟಿಸುವ ಜಿಲ್ಲೆಗಳ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು ಕ್ರೀಡಾಸ್ಪರ್ಧೆಗಳ ಫಲಿತಾಂಶ ಪಟ್ಟಿಯನ್ನು ಕನಿಷ್ಠ ಒಂದು ವಾರದ ಮುನ್ನ ಸಂಬಂಧಿಸಿದ ಕ್ರೀಡೆಗಳ ರಾಜ್ಯಮಟ್ಟದ ಕ್ರೀಡಾಕೂಟಗಳನ್ನು ಸಂಘಟಿಸುವ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳಿಗೆ ತಪ್ಪದೇ ನೋಂದಣಿ ಅಂಚೆ ಮೂಲಕ ಅಥವಾ ಮುದ್ದಾಂ ತಲುಪಿಸುವುದು.

ರಾಜ್ಯಮಟ್ಟದಿಂದ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಕ್ರೀಡಾಪಟುಗಳ ಫಲಿತಾಂಶ ಪಟ್ಟಿಯನ್ನು ಕ್ರಮಬದ್ಧವಾಗಿ ತಯಾರಿಸುವುದು. ರಾಜ್ಯಮಟ್ಟದ ಕ್ರೀಡಾಕೂಟ ಮುಕ್ತಾಯವಾದ ನಂತರ ವಿಜೇತ ಕ್ರೀಡಾಪಟುಗಳ ಸಭೆಯನ್ನು ಕರೆದು ರಾಷ್ಟ್ರಮಟ್ಟದ ಕ್ರೀಡಾಸ್ಪರ್ಧೆಗೆ ಮಾಡಿಕೊಳ್ಳಬೇಕಾದ ಪೂರ್ವಸಿದ್ದತೆಗಳ ಬಗ್ಗೆ ಅಗತ್ಯ ಮಾಹಿತಿಯನ್ನು ನೀಡುವುದು ಮತ್ತು ನಿಖರವಾದ ಟ್ರಾಕ್ ಸೂಟ್ ಅಳತೆ, ಷೂ ಅಳತೆ ಮತ್ತು ಕ್ರೀಡಾಉಡುಪುಗಳ ವಿವರಗಳನ್ನು ಫಲಿತಾಂಶ ಪಟ್ಟಿಯಲ್ಲಿ ಮತ್ತು ಎಲಿಜಿಬಿಲಿಟಿ ಸರ್ಟಿಫಿಕೇಟಿನಲ್ಲಿ ತಪ್ಪದೇ ನಮೂದಿಸಲು ತಿಳಿಸಲಾಯಿತು.

ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಕ್ರೀಡಾ ತಂಡಗಳಿಗೆ ಮೇಲ್ವಿಚಾರಕರು/ದೈಹಿಕ ಶಿಕ್ಷಣ ಶಿಕ್ಷಕರು/ತರಬೇತುದಾರರನ್ನು ನೇಮಕ ಮಾಡಲು ಸೂಕ್ತ ದೈಹಿಕ ಶಿಕ್ಷಣ ಶಿಕ್ಷಕರ ಪಟ್ಟಿಯನ್ನು ಹೆಸರು/ತಂದೆಯ ಹೆಸರು ಮತ್ತು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಮತ್ತು ಮೊಬೈಲ್ ಸಂಖ್ಯೆಗಳನ್ನು ಕಡ್ಡಾಯವಾಗಿ ಫಲಿತಾಂಶ ಪಟ್ಟಿಯೊಂದಿಗೆ ಸಲ್ಲಿಸುವುದು.

ಮೇಲ್ವಿಚಾರಕರು/ದೈಹಿಕ ಶಿಕ್ಷಣ ಶಿಕ್ಷಕರು/ತರಬೇತುದಾರರನ್ನು ಸೂಚಿಸುವಾಗ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಕ್ರೀಡಾಪಟುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗಿರುವ ಶಾಲೆಗಳ ದೈಹಿಕ ಶಿಕ್ಷಣ ಶಿಕ್ಷಕರಿಗೆ ಪ್ರಥಮ ಆದ್ಯತೆಯನ್ನು ನೀಡುವುದು ಮತ್ತು ಬಾಲಕಿಯರ ತಂಡಕ್ಕೆ ಮೇಲ್ವಿಚಾರಕರಾಗಿ ನೇಮಿಸಲು ಕಡ್ಡಾಯವಾಗಿ ಮಹಿಳಾ ದೈಹಿಕ ಶಿಕ್ಷಣ ಶಿಕ್ಷಕರ ಹೆಸರನ್ನು ಸೂಚಿಸುವುದು ಕಡ್ಡಾಯವೆಂದು ತಿಳಿಸಲಾಯಿತು. ಸಂಬಂಧಿಸಿದ ಶಾಲೆಯಲ್ಲಿ ಮಹಿಳಾ ದೈಹಿಕ ಶಿಕ್ಷಣ ಶಿಕ್ಷಕರಿರದಿದ್ದಲ್ಲಿ ಆಯಾ ತಾಲ್ಲೂಕಿನಲ್ಲಿರುವ ಅಥವಾ ಜಿಲ್ಲೆಯಲ್ಲಿರುವ ಮಹಿಳಾ ದೈಹಿಕ ಶಿಕ್ಷಕರನ್ನೇ ನಿಯೋಜಿಸುವುದು.

**ಕ್ರಮ: ಉಪ ನಿರ್ದೇಶಕರು [ಆಡಳಿತ]/ಜಿಲ್ಲಾ ದೈಹಕ ಶಿಕ್ಷಣ ಅಧಿಕಾರಿಗಳು**

**17. ವಿವಿಧ ಹಂತದ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳು/ತಂಡದ ಮೇಲ್ವಿಚಾರಕರು ಮತ್ತು ನಿರ್ಣಾಯಕರಿಗೆ ನೀಡಬಹುದಾದ ದಿನಭತ್ಯೆ/ಗೌರವ ಸಂಭಾವನೆ ದರಗಳು**

| ಕ್ರ. ಸಂ | ಸಂಘಟನೆ ಹಂತಗಳು | ಕ್ರೀಡಾಪಟುಗಳಿಗೆ ದಿನಭತ್ಯೆ ರೂ...ಗಳಲ್ಲಿ | ತಂಡದ ಮ್ಯಾನೇಜರ್‌ಗೆ/ ನಿರ್ಣಾಯಕರಿಗೆ ದಿನಭತ್ಯೆ ರೂ...ಗಳಲ್ಲಿ | ಸಂಘ ಸಂಸ್ಥೆಗಳಿಂದ ನಿಯೋಜನೆಗೊಂಡ ನಿರ್ಣಾಯಕರಿಗೆ ಗೌರವ ಸಂಭಾವನೆ ದಿನವೊಂದಕ್ಕೆ ರೂ....ಗಳಲ್ಲಿ |
|---|---|---|---|---|
| 1. | ಹೋಬಳಿ/ವೃತ್ತ | 40–00 | 50–00 | – |
| 2. | ತಾಲ್ಲೂಕು ಮಟ್ಟ | 50–00 | 60–00 | – |
| 3. | ಜಿಲ್ಲಾ ಮಟ್ಟ | 60–00 | 70–00 | 250–00 |
| 4. | ವಿಭಾಗ ಮಟ್ಟ | 100–00 | 140–00 | 250–00 |
| 5. | ರಾಜ್ಯ ಮಟ್ಟ | 120–00 | 140–00 | 250–00 |
| 6. | ರಾಷ್ಟ್ರ ಮಟ್ಟ | 225–00 | 250–00 | – |
| 7. | ಮುಖ್ಯ ಮೇಲ್ವಿಚಾರಕರಿಗೆ | – | 300–00 | – |

**ವಿಶೇಷ ಸೂಚನೆ:**

- ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ನಿಯಮಾನುಸಾರ ಪ್ರಯಾಣ ಭತ್ಯೆ/ದಿನಭತ್ಯೆ ಗಳನ್ನು ಶಾಲಾ ಕ್ರೀಡಾ ಚಾಲ್ತಿ ಅಥವಾ ಲಭ್ಯವಿರುವ ಇತರೆ ಯಾವುದೇ ಸಂಚಿತ ನಿಧಿಯಿಂದ ಭರಿಸುವುದು.
- ವಲಯ/ಜಿಲ್ಲಾ/ ವಿಭಾಗ/ ರಾಜ್ಯ ಮತ್ತು ರಾಷ್ಟ್ರಮಟ್ಟದ ಕ್ರೀಡಾಕೂಟಗಳಿಗೆ,ರಾಷ್ಟ್ರೀಯ ಹಬ್ಬಗಳು ಹಾಗೂ ಇಲಾಖೆಯು ಸಂಘಟಿಸುವ ಕಾರ್ಯಕ್ರಮಗಳಿಗೆ ತೆರಳುವ ಪಥ ಸಂಚಲನ ತಂಡ ಮತ್ತು ವಾದ್ಯ ತಂಡದ ವಿದ್ಯಾರ್ಥಿಗಳಿಗೆ ತಲಾ ರೂ.25/–ರಂತೆ ದಿನಭತ್ಯೆ ಹಾಗೂ ವಾಸ್ತವಿಕ ಬಸ್ ದರವನ್ನು **ಶಾಲಾ ಕ್ರೀಡಾ ಚಾಲ್ತಿ**

**<u>ಅಥವಾ ಇತರೆ ಯಾವುದೇ ಸಂಚಿತ ನಿಧಿಯಿಂದ</u>** ಭರಿಸಲು ಶಾಲಾ ಮುಖ್ಯಸ್ಥರಿಗೆ ಅನುಮತಿ ನೀಡಿದೆ.[ವಿದ್ಯಾರ್ಥಿಗಳ ಸಂಖ್ಯೆ ಗರಿಷ್ಠ 35ಕ್ಕೆ ಮೀರಬಾರದು][ಇಂತಹ ಖರ್ಚು/ವೆಚ್ಚಗಳನ್ನು ಭರಿಸುವ ಬಗ್ಗೆ **ಜಿಲ್ಲಾ ಉಪ ನಿರ್ದೇಶಕರು[ಆ] ಇವರಿಂದ ಅನುಮತಿ ಪಡೆಯುವುದು.**

**ವಿಳಂಬವಾದಲ್ಲಿ ಅನುಮೋದನೆ ಆಗುವವರೆಗೂ ಯಾವುದೇ ಹಣವನ್ನು ವಿದ್ಯಾರ್ಥಿ ಕ್ರೀಡಾನಿಧಿಯಿಂದ ಡ್ರಾ ಮಾಡಲು ಅವಕಾಶವಿಲ್ಲವೆಂದು ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾಯಿತು.**

**ಕ್ರಮ: ಉಪ ನಿರ್ದೇಶಕರು [ಆಡಳಿತ]/ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು**

**18. ರಾಜ್ಯ ಮಟ್ಟದಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ತರಬೇತಿಯನ್ನು ಕೈಗೊಳ್ಳುವ ಬಗ್ಗೆ:-**

ರಾಜ್ಯ ಮಟ್ಟದಲ್ಲಿ ವಿಜೇತರಾಗಿ ರಾಷ್ಟ್ರ ಮಟ್ಟದ ಕ್ರೀಡಾಸ್ಪರ್ಧೆಗಳಲ್ಲಿ ಭಾಗವಹಿಸುವಂತಹ ಮಕ್ಕಳಿಗೆ ತರಬೇತಿಯನ್ನು ನಡೆಸುವ ಬಗ್ಗೆ ಚರ್ಚಿಸಿ ರಾಜ್ಯಮಟ್ಟದಲ್ಲಿ ವಿಜೇತ ತಂಡದ ಕ್ರೀಡಾಪಟುಗಳಿಗೆ ಸಂಬಂಧಿಸಿದ ಜಿಲ್ಲೆಗಳಲ್ಲಿ ಸೂಕ್ತ ಮೂಲಭೂತ ಸೌಕರ್ಯಗಳಿದ್ದಲ್ಲಿ ಅಂತಹ ಜಿಲ್ಲೆಗಳಿಗೆ ತರಬೇತಿಯನ್ನು ನಡೆಸಲು ಅನುಮತಿ ನೀಡಲಾಗುವುದು. ಕ್ರೀಡಾಸ್ಪರ್ಧೆಗಳಲ್ಲಿ ವಿಜೇತ ತಂಡದ ಕೆಲವು ಶಾಲೆ/ಕಾಲೇಜು/ಸಂಸ್ಥೆಗಳು ತರಬೇತಿ ಶಿಬಿರಗಳನ್ನು ನಡೆಸುವ ಬಗ್ಗೆ ನೇರವಾಗಿ ಪ್ರಸ್ತಾವನೆಯನ್ನು ಕಛೇರಿಗೆ ಸಲ್ಲಿಸುತ್ತಿರುವುದನ್ನು ಸಭೆಯಲ್ಲಿ ಪ್ರಸ್ತಾಪಿಸಿ, ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು ತರಬೇತಿಯನ್ನು ನಡೆಸಲು ಸೂಕ್ತ ಮೂಲಭೂತ ಸೌಕರ್ಯಗಳಿರುವ ಬಗ್ಗೆ ಪರಿಶೀಲಿಸಿ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಹಾಗೂ ತರಬೇತಿಯನ್ನು ನೀಡುವ ಸಂದರ್ಭದಲ್ಲಿ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕು ಎಂದು ತಿಳಿಸಲಾಯಿತು.

- ಪ್ರಥಮ ಸ್ಥಾನ [WINNERS TEAM] ಪಡೆದ ಜಿಲ್ಲೆಯ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿರುವ ಮತ್ತು ವಸತಿಯುತ ಶಿಬಿರ ನಡೆಸಲು ಸೂಕ್ತ ಮೂಲಭೂತ ಸೌಕರ್ಯಗಳಿದ್ದಲ್ಲಿ ಆ ಜಿಲ್ಲೆಗೆ ತರಬೇತಿ ಶಿಬಿರ ನಡೆಸಲು ಮೊದಲ ಆದ್ಯತೆ ನೀಡುವುದು.
- ತರಬೇತಿಯನ್ನು ನಡೆಸುವ ಮುನ್ನ ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಿ ಪೂರ್ವಾನುಮತಿಯನ್ನು ಪಡೆಯುವುದು. ಪ್ರಸ್ತಾವನೆಯನ್ನು ಸಲ್ಲಿಸುವ ಮುನ್ನ ಸಂಬಂಧಿಸಿದ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು ತರಬೇತಿ ಶಿಬಿರವನ್ನು ನಡೆಸಲು ಅಗತ್ಯ ಮೂಲಭೂತ ಸೌಕರ್ಯಗಳಿರುವ ಬಗ್ಗೆ ಪರಿಶೀಲಿಸಿ ಶಿಫಾರಸ್ಸು ಮಾಡುವುದು.
- ತರಬೇತಿ ನಡೆಸುವಂತಹ ಸಂದರ್ಭದಲ್ಲಿ ಮಕ್ಕಳ ವಾಸ್ತವ್ಯಕ್ಕೆ ಕೊಠಡಿಗಳು, ನೀರು, ವಿದ್ಯುತ್ ಸೌಕರ್ಯ, ಶೌಚಾಲಯದ ವ್ಯವಸ್ಥೆ , ಸುರಕ್ಷತೆ ಬಗ್ಗೆ ವ್ಯವಸ್ಥೆ ಒಳಗೊಂಡಿರಬೇಕು.
- ಕ್ರೀಡಾಪಟುಗಳಿಗೆ ಉತ್ತಮ ಮತ್ತು ಕ್ರೀಡಾಕೌಶಲ್ಯಗಳನ್ನು ಕಲಿಸಲು ತರಬೇತಿ ಶಿಬಿರಗಳಿಗೆ ಸಂಬಂಧಿಸಿದ ಕ್ರೀಡೆಗಳಲ್ಲಿ ಎನ್.ಐ.ಎಸ್ ತರಬೇತಿ ಹೊಂದಿರುವ ಉತ್ತಮ ತರಬೇತುದಾರರನ್ನು ನೇಮಕ ಮಾಡಿಕೊಳ್ಳುವುದು ಹಾಗೂ ತರಬೇತುದಾರರ ವಿದ್ಯಾರ್ಹತೆ ಬಗ್ಗೆ ದಾಖಲೆಗಳನ್ನು ಪಡೆಯುವುದು.
- ತರಬೇತಿ ನಡೆಸುವ ಕ್ರೀಡಾಂಗಣವು ವಸತಿ ಪ್ರದೇಶ ಹತ್ತಿರದಲ್ಲಿರಬೇಕು. ಹಾಗೂ ಬಾಲಕ ಬಾಲಕಿಯರಿಗೆ ಪ್ರತ್ಯೇಕವಾದಂತಹ ವಸತಿ ಕಲ್ಪಿಸುವುದು.
- ತರಬೇತಿಗೆ ಅಗತ್ಯವಿರುವ ಖರ್ಚು ವೆಚ್ಚದ ಬಗ್ಗೆ ಆಯವ್ಯಯವನ್ನು ತಯಾರಿಸಿಕೊಳ್ಳಬೇಕು
- ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು/ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷರು ತರಬೇತಿ ಶಿಬಿರದ ಮೇಲ್ವಿಚಾರಕರಾಗಿ ಕಾರ್ಯ ನಿರ್ವಹಿಸುವುದು.
- ತರಬೇತಿ ಶಿಬಿರದಲ್ಲಿ ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ಕಡ್ಡಾಯವಾಗಿ ಇಡತಕ್ಕದ್ದು.
- ಕ್ರೀಡಾಪಟುಗಳಿಗೆ ತರಬೇತಿ ಸಂದರ್ಭದಲ್ಲಿ ಅವಘಡಗಳು ಸಂಭವಿಸಿದಲ್ಲಿ ತುರ್ತು ವೈದ್ಯಕೀಯ ಚಿಕಿತ್ಸೆಗಾಗಿ ಸಮೀಪದಲ್ಲಿರುವ ವೈದ್ಯರು/ಆಸ್ಪತ್ರೆ/ನರ್ಸಿಂಗ್ ಹೋಂ/ಅಂಬುಲೆನ್ಸ್ ವಾಹನ ಇವುಗಳ ದೂರವಾಣಿ ಸಂಖ್ಯೆಗಳೊಂದಿಗೆ ಮಾಹಿತಿಯನ್ನು ಕಡ್ಡಾಯವಾಗಿ ಹೊಂದಿರುವುದು.
- ಸಮೀಪದ ಪೊಲೀಸ್ ಠಾಣೆಯ ಬಗ್ಗೆ ಮಾಹಿತಿಯನ್ನು ಹೊಂದಿರುವುದು.
- ತರಬೇತಿಯನ್ನು ನೀಡುವಂತಹ ಸಂದರ್ಭದಲ್ಲಿ ಎರಡು ತಂಡಗಳಿದ್ದಲ್ಲಿ ಒಬ್ಬರು ತರಬೇತುದಾರರನ್ನು ಹಾಗೂ ನಾಲ್ಕು ತಂಡಗಳಿದ್ದಲ್ಲಿ ಇಬ್ಬರು ತರಬೇತುದಾರರನ್ನು ನೇಮಿಸಿಕೊಳ್ಳಬೇಕಾಗಿರುತ್ತದೆ. ಜೊತೆಗೆ ತಂಡದ ಮೇಲ್ವಿಚಾರಕರಾಗಿ ಬಾಲಕಿಯರ ತಂಡಕ್ಕೆ ಕಡ್ಡಾಯವಾಗಿ ಒಬ್ಬ ಮಹಿಳಾ ಶಿಕ್ಷಕಿಯರನ್ನೇ ನೇಮಿಸಬೇಕು.
- ತರಬೇತಿಯನ್ನು ನಡೆಸಿದ ಬಗ್ಗೆ ಎಲ್ಲಾ ದಾಖಲೆಗಳಿಟ್ಟಿರಬೇಕು.[ತರಬೇತಿ ಸಂದರ್ಭದಲ್ಲಿ ತೆಗೆದ ಭಾವಚಿತ್ರಗಳೊಂದಿಗೆ(ACTION PHOTOS)

**ಕ್ರಮ: ಉಪ ನಿರ್ದೇಶಕರು [ಆಡಳಿತ]/ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು**

* 2016-17 ಮತ್ತು 2017-18ನೇ ಸಾಲಿನ ರಾಜ್ಯ ವಿದ್ಯಾರ್ಥಿ ಕ್ರೀಡಾನಿದಿ ವಂತಿಕೆಯನ್ನು ಸಲ್ಲಿಸಿದ ಬಗ್ಗೆ ಪರಿಶೀಲಿಸಿ ಕೆಲವು ಜಿಲ್ಲೆಗಳು ಬಾಕಿ ಉಳಿಸಿಕೊಂಡಿರುವ ಹಿಂದಿನ ಬಾಕಿಯನ್ನು ಶಾಲಾವಾರು/ಬ್ಲಾಕ್‌ವಾರು ಮಾಹಿತಿಯೊಂದಿಗೆ ಸಲ್ಲಿಸಲು ತಿಳಿಸಲಾಯಿತು.
* ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು 2018-19ನೇ ಸಾಲಿನಲ್ಲಿ ಶಾಲೆಗಳಲ್ಲಿ ದಾಖಲಾದ ಮಕ್ಕಳ ನಿಖರವಾದ ಅಂಕಿ ಅಂಶಗಳನ್ನು ಪಡೆದು ಅದರಂತೆ ಆಯವ್ಯಯ ಪ್ರಸ್ತಾವನೆಯನ್ನು ಸಿದ್ದಪಡಿಸಿ ಜುಲೈ ಅಂತ್ಯದೊಳಗೆ ಕಡ್ಡಾಯವಾಗಿ ಸಲ್ಲಿಸುವಂತೆ ತಿಳಿಸಲಾಯಿತು. ಹಾಗೂ ಆಯಾ ಜಿಲ್ಲೆಗಳಲ್ಲಿ ಸಂಗ್ರಹವಾಗುವ ವಿದ್ಯಾರ್ಥಿ ಕ್ರೀಡಾನಿಧಿಯಲ್ಲಿ ರಾಜ್ಯ ವಿದ್ಯಾರ್ಥಿ ಕ್ರೀಡಾನಿಧಿ ವಂತಿಗೆಯನ್ನು ಸಲ್ಲಿಸಿ ಉಳಿದ ಆಯವ್ಯಯದ ವ್ಯಾಪ್ತಿಯಲ್ಲಿ ಆಯಾ ಜಿಲ್ಲೆಗಳಲ್ಲಿ ಪ್ರಚಲಿತವಿರುವ ಹಾಗೂ ಉತ್ತಮ ಫಲಿತಾಂಶವನ್ನು ಹೊಂದಿರುವ ಕ್ರೀಡೆಗಳಿಗೆ ಪ್ರಥಮ ಆದ್ಯತೆಯನ್ನು ನೀಡಿ ಆಯವ್ಯಯವನ್ನು ಸಿದ್ದಪಡಿಸಲು ತಿಳಿಸಲಾಯಿತು.
* ಸಿ.ಬಿ.ಎಸ್.ಇ. ಮತ್ತು ಐ.ಸಿ.ಎಸ್.ಸಿ ಹೊರತುಪಡಿಸಿ ರಾಜ್ಯ ಸರ್ಕಾರದ ಪಠ್ಯಕ್ರಮವನ್ನು ಅನುಸರಿಸುತ್ತಿರುವ ಸರ್ಕಾರಿ/ಅನುದಾನಿತ/ಅನುದಾನ ರಹಿತ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ 6ನೇ ತರಗತಿಯಿಂದ 10ನೇ ತರಗತಿವರೆಗಿನ ಎಲ್ಲಾ ವರ್ಗದ ಮಕ್ಕಳಿಂದ ಹಾಗೂ ಆದರ್ಶ ವಸತಿ ಶಾಲೆ,ಕಿತ್ತೂರು ರಾಣಿಚೆನ್ನಮ್ಮ , ಕಸ್ತೂರಬಾ ಶಾಲೆ, ಮೊರಾರ್ಜಿ ಶಾಲೆ ಮತ್ತು ಮುಸ್ಲಿಂ ವಸತಿ ಶಾಲೆಗಳ ವಿದ್ಯಾರ್ಥಿಗಳಿಂದಲೂ ವಿದ್ಯಾರ್ಥಿ ಕ್ರೀಡಾನಿಧಿ ವಂತಿಕೆಯನ್ನು ಸಕಾಲದಲ್ಲಿ ಸಂಗ್ರಹಿಸಲು ತಿಳಿಸಲಾಯಿತು.

**ಕ್ರಮ: ಉಪ ನಿರ್ದೇಶಕರು [ಆಡಳಿತ]/ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು**

**19. 2018-19ನೇ ಸಾಲಿನ ವಿಭಾಗಮಟ್ಟ ಮತ್ತು ರಾಜ್ಯಮಟ್ಟದ ಕ್ರೀಡಾಕೂಟಗಳನ್ನು ಸಂಘಟಿಸುವ ಬಗ್ಗೆ ಚರ್ಚಿಸಿ ಕೆಳಕಂಡಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಡೆಸಲು ತೀರ್ಮಾನ ಕೈಗೊಳ್ಳಲಾಯಿತು.**

**2018-19ನೇ ಸಾಲಿನಲ್ಲಿ ವಿಭಾಗ ಮಟ್ಟ ಮತ್ತು ರಾಜ್ಯ ಮಟ್ಟದ ಕ್ರೀಡಾಸ್ಪರ್ಧೆಗಳನ್ನು ಸಂಘಟಿಸುವ ಜಿಲ್ಲೆಗಳು.**

| ಕ್ರ.ಸಂ | ಜಿಲ್ಲೆಯ ಹೆಸರು | ಸಂಘಟಿಸುವ ಕ್ರೀಡೆಗಳು | |
|---|---|---|---|
| | | ವಿಭಾಗಮಟ್ಟ | ರಾಜ್ಯಮಟ್ಟ |
| | | **ಬೆಂಗಳೂರು ವಿಭಾಗ** | |
| 1 | ಬೆಂಗಳೂರು ಉತ್ತರ | ಹಾಕಿ | ಸ್ಕೇಟಿಂಗ್, |
| 2 | ಬೆಂಗಳೂರು ದಕ್ಷಿಣ | ಬ್ಯಾಸ್ಕೆಟ್‌ಬಾಲ್ ಮತ್ತು ಥ್ರೋ-ಬಾಲ್ | ಈಜು ಮತ್ತು ಡೈವಿಂಗ್ |
| 3 | ಬೆಂಗಳೂರು ಗ್ರಾ | ಖೋ-ಖೋ ಯೋಗಾಸನ ಹ್ಯಾಂಡ್ ಬಾಲ್ | ಯೋಗಾಸನ |
| 4 | ಕೋಲಾರ | ಫುಟ್ ಬಾಲ್ | ಜೂಡೋ |
| 5 | ತುಮಕೂರು | ಕ್ರಿಕೇಟ್ | 14 ವರ್ಷ ವಯೋಮಿತಿ ಅಥ್ಲೆಟಿಕ್ಸ್ |
| 6 | ಮಧುಗಿರಿ | ಬಾಲ್ ಬ್ಯಾಡ್ಮಿಂಟನ್ | ಚೆಸ್ಸ್ |
| 7 | ಚಿತ್ರದುರ್ಗ | ಕಬ್ಬಡಿ | ----- |
| 8 | ಶಿವಮೊಗ್ಗ | ವಾಲಿ ಬಾಲ್ | ವಾಲಿ ಬಾಲ್ |
| 9 | ದಾವಣಗೆರೆ | ಷಟಲ್ ಬ್ಯಾಡ್ಮಿಂಟನ್ | ಖೋ-ಖೋ (17 ವಯೋಮಿತಿ) |
| 10 | ರಾಮನಗರ | ---- | ಕುಸ್ತಿ |
| 11 | ಚಿಕ್ಕಬಳ್ಳಾಪುರ | —— | ಥ್ರೋ-ಬಾಲ್ |
| | | **ಬೆಳಗಾವಿ ವಿಭಾಗ** | |
| 12 | ಚಿಕ್ಕೋಡಿ | ಖೋ-ಖೋ | ಖೋ-ಖೋ (14 ವಯೋಮಿತಿ) |
| 13 | ಬೆಳಗಾವಿ | ಹಾಕಿ | ----- |
| 14 | ವಿಜಯಪುರ | ಫುಟ್ ಬಾಲ್ ಮತ್ತು ಬ್ಯಾಸ್ಕೆಟ್ ಬಾಲ್ | ಬ್ಯಾಸ್ಕೆಟ್ ಬಾಲ್ |
| 15 | ಬಾಗಲಕೋಟೆ | ಕಬ್ಬಡಿ ಮತ್ತು ಹ್ಯಾಂಡ್ ಬಾಲ್ | ಹ್ಯಾಂಡ್ ಬಾಲ್ |
| 16 | ಧಾರವಾಡ | ಯೋಗಾಸನ ಮತ್ತು ಕ್ರಿಕೇಟ್ | ಕಬ್ಬಡಿ |
| 17 | ಗದಗ | ಬಾಲ್‌ಬ್ಯಾಡ್ಮಿಂಟನ್ | ಕರಾಟೆ |
| 18 | ಹಾವೇರಿ | ವಾಲಿ ಬಾಲ್ | ---- |
| 19 | ಉತ್ತರಕನ್ನಡ | ಥ್ರೋ-ಬಾಲ್ | --- |
| 20 | ಸಿರ್ಸಿ ಶೈಕ್ಷಣಿಕ ಜಿಲ್ಲೆ | ಷಟಲ್ ಬ್ಯಾಡ್ಮಿಂಟನ್ | ವಿಕಲಚೇತನ ಕ್ರೀಡಾಕೂಟ |
| | | **ಕಲಬುರಗಿ ವಿಭಾಗ** | |
| 21 | ಯಾದಗಿರಿ | ಕಬ್ಬಡಿ ಮತ್ತು ವಾಲಿಬಾಲ್ | --- |
| 22 | ರಾಯಚೂರು | ಕ್ರಿಕೇಟ್ | --- |
| 23 | ಕೊಪ್ಪಳ | ಬಾಲ್‌ಬ್ಯಾಡ್ಮಿಂಟನ್ | --- |

| | | | |
|---|---|---|---|
| 24 | ಕಲಬುರಗಿ | ಹ್ಯಾಂಡ್‌ಬಾಲ್ ಮತ್ತು ಥ್ರೋ-ಬಾಲ್ | ಲಾನ್‌ಟೆನಿಸ್ |
| 25 | ಬೀದರ್ | ಯೋಗಾಸನ ಮತ್ತು ಷಟಲ್ ಬ್ಯಾಡ್ಮಿಂಟನ್ | --- |
| 26 | ಬಳ್ಳಾರಿ | ಖೋ-ಖೋ, ಹಾಕಿ, ಬಾಸ್ಕೆಟ್ ಬಾಲ್ ಫುಟ್ ಬಾಲ್ | ---- |

| | | | |
|---|---|---|---|
| **ಮೈಸೂರು ವಿಭಾಗ** | | | |
| 27 | ಮೈಸೂರು | ಕ್ರಿಕೆಟ್ ಮತ್ತು ಷಟಲ್ ಬ್ಯಾಡ್ಮಿಂಟಲ್ | ಷಟಲ್ ಬ್ಯಾಡ್ಮಿಂಟನ್ ಮತ್ತು ಕ್ರಿಕೆಟ್ |
| 28 | ಚಾಮರಾಜನಗರ | ಬಾಲ್ ಬ್ಯಾಡ್ಮಿಂಟನ್ | --- |
| 29 | ಮಂಡ್ಯ | ಖೋ-ಖೋ | (17 ವಯೋಮಿತಿ) ಅಥ್ಲಟಿಕ್ಸ್ |
| 30 | ಹಾಸನ | ಥ್ರೋ ಬಾಲ್ | ಹಾಕಿ |
| 31 | ಚಿಕ್ಕಮಗಳೂರು | ವಾಲಿ ಬಾಲ್ ಮತ್ತು ಹ್ಯಾಂಡ್ ಬಾಲ್ | --- |
| 32 | ದಕ್ಷಿಣ ಕನ್ನಡ | ಬ್ಯಾಸ್ಕೆಟ್ ಬಾಲ್, ಫುಟ್ ಬಾಲ್ ಮತ್ತು ಕಬ್ಬಡಿ. | ನೆಟ್-ಬಾಲ್, ಬಾಲ್ ಬ್ಯಾಡ್ಮಿಂಟನ್ ಫುಟ್ ಬಾಲ್ |
| 33 | ಕೊಡಗು | ಹಾಕಿ | ---- |
| 34 | ಉಡುಪಿ | ಯೋಗಾಸನ | ಟೇಬಲ್ ಟೆನೀಸ್ |

**2018-19ನೇ ಸಾಲಿನಲ್ಲಿ ರಾಷ್ಟ್ರ ಮಟ್ಟದ ಕ್ರೀಡಾಸ್ಪರ್ಧೆಗಳನ್ನು ಸಂಘಟಿಸುವ ಜಿಲ್ಲೆಗಳು.**

ಎಸ್.ಜಿ.ಎಫ್.ಐ ವತಿಯಿಂದ 2018-19ನೇ ಸಾಲಿನಲ್ಲಿ (Event Calender) ಪ್ರಕಾರ ಕರ್ನಾಟಕ ರಾಜ್ಯಕ್ಕೆ ಈ ಕೆಳಕಂಡ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲು ಸೂಚಿಸಿರುತ್ತಾರೆ. ಅದರಂತೆ ಸಭೆಯಲ್ಲಿ ಮಾನ್ಯ ನಿರ್ದೇಶಕರು ಪ್ರೌಢ ಶಿಕ್ಷಣ ರವರು ಈ ಕೆಳಕಂಡ ಜಿಲ್ಲೆಗಳಿಗೆ ಹಂಚಿಕೆ ಮಾಡಲಾಯಿತ್ತು.

| ಕ್ರಮ ಸಂಖ್ಯೆ | ಸ್ಪರ್ಧೆಯ ಹೆಸರು | ಜಿಲ್ಲೆ |
|---|---|---|
| 1. | **ಕಬ್ಬಡಿ (14 ವಯೋಮಿತಿಯ ಬಾಲಕರ)** | **ಧಾರವಾಡ (ಉಪ ನಿರ್ದೇಶಕರು ಆಡಳಿತ)** |
| 2. | **ಖೋ-ಖೋ (14 ವಯೋಮಿತಿಯ ಬಾಲಕರ)** | **ಮಂಡ್ಯ (ಉಪ ನಿರ್ದೇಶಕರು ಆಡಳಿತ)** |
| 3. | **ಖೋ-ಖೋ (14 ವಯೋಮಿತಿಯ ಬಾಲಕಿಯರು)** | **ಬೆಂಗಳೂರು ಗ್ರಾ (ಉಪ ನಿರ್ದೇಶಕರು ಆಡಳಿತ)** |

**20. ನಗದು ಬಹುಮಾನದ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ**

2017-18ನೇ ಸಾಲಿನಲ್ಲಿ ರಾಜ್ಯಮಟ್ಟ ಮತ್ತು ರಾಷ್ಟ್ರಮಟ್ಟದ ಕ್ರೀಡಾಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ನೀಡುವ ನಗದು ಬಹುಮಾನದ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ತಿಳಿಸಲಾಯಿತು.]

**ಕ್ರಮ : ಹಿರಿಯ ಸಹಾಯಕ ನಿರ್ದೇಶಕರು[ದೈಹಿಕ ಶಿಕ್ಷಣ]**

**21. ಪ್ರಶಸ್ತಿ ಪತ್ರಗಳ ಮುದ್ರಣ**

2018-19ನೇ ಸಾಲಿನಲ್ಲಿ ವಿಭಾಗಮಟ್ಟ ಮತ್ತು ರಾಜ್ಯಮಟ್ಟದ ಕ್ರೀಡಾಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ನೀಡುವ ಪ್ರಶಸ್ತಿಪತ್ರಗಳನ್ನು ಸಕಾಲದಲ್ಲಿ ಮುದ್ರಣ ಮಾಡಿಸಿಕೊಡಲು ತಿಳಿಸಲಾಯಿತು.

**ಕ್ರಮ; ಹಿರಿಯ ಸಹಾಯಕ ನಿರ್ದೇಶಕರು[ದೈಹಿಕ ಶಿಕ್ಷಣ]**

22. ಕೆಲವು ತಾಲ್ಲೂಕು /ಜಿಲ್ಲೆಗಳಲ್ಲಿ ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರು ಮತ್ತು ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು ವಯೋನಿವೃತ್ತಿ ಹೊಂದಿದ ಮತ್ತು ವರ್ಗಾವಣೆಯಾದ ಸಂದರ್ಭಗಳಲ್ಲಿ ದೈಹಿಕ ಶಿಕ್ಷಣ ಅಧಿಕಾರಿಗಳನ್ನು ಹೊರತುಪಡಿಸಿ ಇತರೆ ವಿಷಯಗಳ ಪರಿವೀಕ್ಷಕರು ಅಥವಾ ಮುಖ್ಯೋಪಾಧ್ಯಾಯರುಗಳಿಗೆ ದೈಹಿಕ ಶಿಕ್ಷಣ ಅಧಿಕಾರಿಗಳ ವಿಶಿಷ್ಟ ಛಾರ್ಜನ್ನು ನೀಡಿರುವುದು ಗಮನಿಸಿದ್ದು, ದೈಹಿಕ ಶಿಕ್ಷಣ ಅಧಿಕಾರಿಗಳಲ್ಲದ ಅಧಿಕಾರಿಗಳಿಂದ ಕ್ರೀಡಾಸಂಘಟನೆ ಮತ್ತು ಕ್ರೀಡಾಪ್ರಗತಿಯ ಬಗ್ಗೆ ಪರಿಶೀಲನೆ ನಡೆಸುವುದು ನ್ಯಾಯಸಮ್ಮತವಲ್ಲ ಆದ್ದರಿಂದ ದೈಹಿಕ ಶಿಕ್ಷಣ ಅಧಿಕಾರಿಗಳ ಹುದ್ದೆಗಳಲ್ಲಿ ಇತರೆ ವಿಷಯಗಳ ಅಧಿಕಾರಿಗಳನ್ನು ನಿಯೋಜಿಸದೇ ತಾಲ್ಲೂಕ ಮಟ್ಟದಲ್ಲಿ ಮತ್ತು ಜಿಲ್ಲೆಗಳಲ್ಲಿ ಜೇಷ್ಟತೆ ಮತ್ತು ನುರಿತ ಅನುಭವಿ ದೈಹಿಕ ಶಿಕ್ಷಣ ಶಿಕ್ಷಕರು ಮತ್ತು ತಾಲ್ಲೂಕು ದೈಹಿಕ ಶಿಕ್ಷಣ ಪರವೀಕ್ಷಕರುಗಳನ್ನೇ ನಿಯೋಜಿಸಲು ಕ್ರಮವಹಿಸಲು ಜಿಲ್ಲಾ ಉಪ ನಿರ್ದೇಶಕರಿಗೆ ಸೂಚಿಸಲು ತೀರ್ಮಾನಿಸಲಾಯಿತು.

**ಕ್ರಮ; ಸಹ ನಿರ್ದೇಶಕರು[ದೈಹಿಕ ಶಿಕ್ಷಣ]**

**23. ಶಾಲೆಗಳಲ್ಲಿ ರಾಷ್ಟ್ರಗೀತೆ/ನಾಡಗೀತೆ**

ಶಾಲೆಗಳಲ್ಲಿ ಪ್ರತಿದಿನ ಬೆಳಗ್ಗೆ ಮಕ್ಕಳಿಗೆ ರಾಷ್ಟ್ರಗೀತೆ ಮತ್ತು ನಾಡಗೀತೆಗಳನ್ನು ಲಯಬದ್ಧವಾಗಿ ಹಾಡಿಸುವ ಬಗ್ಗೆ ಸಿ.ಡಿ ಗಳನ್ನು ವಿತರಿಸಲಾಯಿತು, ಸಿ.ಡಿ ಯಲ್ಲಿ ಹಾಡಿರುವ ನಾಡಗೀತೆಯ ತಾಳ ಮತ್ತು ಲಯ ಬದ್ಧವಾಗಿ ಎಲ್ಲಾ ಶಾಲೆಗಳಲ್ಲಿ ಕಡ್ಡಾಯವಾಗಿ ವಿದ್ಯಾರ್ಥಿಗಳಿಂದ ಹಾಡುವಂತೆ ಕ್ರಮವಹಿಸಲು ಸೂಚಿಸಲಾಯಿತು.

**ಕ್ರಮ: ಉಪ ನಿರ್ದೇಶಕರು [ಆಡಳಿತ]/ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು/ ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರು**

**24 .ನಕಲಿ ಕ್ರೀಡಾಪಟುಗಳ ಆಯ್ಕೆಗಳನ್ನು ತಡೆಯುವ ಬಗ್ಗೆ**

ಕೆಲವೊಂದು ಕ್ರೀಡೆಗಳಲ್ಲಿ ಜಿಲ್ಲಾಮಟ್ಟ/ವಿಭಾಗಮಟ್ಟ/ರಾಜ್ಯಮಟ್ಟಗಳ ಹಂತದಲ್ಲಿ ನಕಲಿ ಕ್ರೀಡಾಪಟುಗಳು ಆಯ್ಕೆಯಾಗಿರುವುದು ಕಂಡು ಬಂದಿದ್ದು, ಈ ರೀತಿ ಆಗುವುದರಿಂದ ಅರ್ಹ ಕ್ರೀಡಾಪಟುಗಳಿಗೆ ಅನ್ಯಾಯವಾದಂತಾಗುತ್ತದೆ. ಆದ್ದರಿಂದ ಪ್ರತಿ ಹಂತದಲ್ಲಿ, ಅಂದರೆ ತಾಲ್ಲೂಕು ಮಟ್ಟದಿಂದ ಜಿಲ್ಲಾಹಂತಕ್ಕೆ ಆಯ್ಕೆಯಾದ ಮತ್ತು ಜಿಲ್ಲಾ ಹಂತದಿಂದ ವಿಭಾಗಮಟ್ಟಕ್ಕೆ ಹಾಗೂ ವಿಭಾಗಮಟ್ಟದಿಂದ ರಾಜ್ಯಮಟ್ಟಕ್ಕೆ ಆಯ್ಕೆಯಾದ ತಂಡದ ತರಬೇತುದಾರರು/ವ್ಯವಸ್ಥಾಪಕರೊಂದಿಗೆ ಕ್ರೀಡಾಪಟುಗಳ ಗುಂಪು ಭಾವಚಿತ್ರ [GROUP PHOTO]ಗಳನ್ನು [ಭಾವಚಿತ್ರವನ್ನು ತೆಗೆಯುವ ಸಂದರ್ಭದಲ್ಲಿ ಕ್ರೀಡಾಪಟುಗಳನ್ನು ಗುರುತಿಸಲು ಅನುಕೂಲವಾಗುವಂತೆ ಹತ್ತಿರದಿಂದ [CLOSEUP] ತೆಗೆಸುವುದು] ಸದರಿ ಭಾವಚಿತ್ರಗಳನ್ನು ಶಾಲಾ ಮುಖ್ಯೋಪಾಧ್ಯಾಯರು/ ಜಿಲ್ಲಾಮಟ್ಟ/ವಿಭಾಗಮಟ್ಟ ಮತ್ತು ರಾಜ್ಯಮಟ್ಟದ ಸಂಘಟಕರ ದೃಢೀಕರಣದೊಂದಿಗೆ ಕಡ್ಡಾಯವಾಗಿ ಒಂದು ಪ್ರತಿಯನ್ನು ಮುಂದಿನ ಹಂತವನ್ನು ಸಂಘಟಿಸುವ ಜಿಲ್ಲೆಗೆ ಕಳುಹಿಸುವುದು ಮತ್ತು ಇನ್ನೊಂದು ಪ್ರತಿಯನ್ನು ಆಯಾ ಹಂತಗಳಲ್ಲಿ ದಾಖಲೆಗಾಗಿ ಇಡುವುದು.

**ಕ್ರಮ: ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರು/ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು**

**25. ಫಲಿತಾಂಶ ಪಟ್ಟಿಯನ್ನು ಸಿದ್ಧಪಡಿಸುವ ಬಗ್ಗೆ:**

ಇಲಾಖೆಯು ನಡೆಸುವ ಎಲ್ಲಾ ಕ್ರೀಡಾಕೂಟಗಳ ಫಲಿತಾಂಶಗಳನ್ನು ಇಲಾಖೆಯ ಅಂತರ್ಜಾಲ ತಾಣದಲ್ಲಿ **[WEB SITE]** ಅಳವಡಿಸಲು ಸಕಾಲದಲ್ಲಿ ಎಲ್ಲಾ ಹಂತದ ಫಲಿತಾಂಶಗಳನ್ನು ಗಣಕೀಕರಿಸಿ ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಲಾಯಿತು. ಶೀಘ್ರ ಪತ್ರ ವ್ಯವಹಾರಕ್ಕೆ ಎಲ್ಲಾ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು ಪ್ರತ್ಯೇಕವಾದ ಈ ಮೈಲ್ ಐ ಡಿ [E-MAIL I D] ಯನ್ನು ಹೊಂದುವುದು ಅತ್ಯಗತ್ಯವೆಂದು ತಿಳಿಸುತ್ತಾ, ಕೂಡಲೇ ಎಲ್ಲಾ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು ಪ್ರತ್ಯೇಕವಾದ ಈ ಮೈಲ್ ಐ ಡಿ ಯನ್ನು ತೆರೆದು ಈ-ಮೇಲ್ ವಿಳಾಸ ಹಾಗೂ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳ ಮೊಬೈಲ್ ಸಂಖ್ಯೆ ಮತ್ತು ಆಯಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರ ಹೆಸರು ಮತ್ತು ಮೊಬೈಲ್ ಸಂಖ್ಯೆಗಳನ್ನು jdpevkn@gmail.com ಈ ವಿಳಾಸಕ್ಕೆ ಮೇಲ್ ಮೂಲಕ ಸಲ್ಲಿಸುವುದು.

**ಕ್ರಮ: ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರು/ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು**

**26 ಪ್ರಶಸ್ತಿ ಪತ್ರಗಳನ್ನು ಸಿದ್ಧಪಡಿಸುವ ಬಗ್ಗೆ**

ಕೆಲವು ಕ್ರೀಡೆಗಳ ಸಂಘಟಕರು ವಿಜೇತ ಕ್ರೀಡಾಪಟುಗಳಿಗೆ ನೀಡಿರುವ ಪ್ರಶಸ್ತಿ ಪತ್ರಗಳಲ್ಲಿ ಹೆಸರು, ಜನ್ಮದಿನಾಂಕ ಮತ್ತು ಇತರೆ ವಿವರಗಳನ್ನು ದಾಖಲಿಸದೇ ಇರುವುದು ಕಂಡುಬಂದಿದ್ದು, ಇಂತಹ ಅವಘಡಗಳಿಗೆ ಅವಕಾಶ ನೀಡದಂತೆ ಪ್ರಶಸ್ತಿ ಪತ್ರಗಳಲ್ಲಿ ಕಡ್ಡಾಯವಾಗಿ ಎಲ್ಲಾ ವಿವರಗಳನ್ನು ನಮೂದಿಸಿದ ನಂತರವೇ ವಿತರಿಸಲು ತಿಳಿಸಲಾಯಿತು.

**ಕ್ರಮ: ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರು/ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು**

ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳ ಸಭೆಗೆ ಆಗಮಿಸಿದ್ದ ಎಲ್ಲಾ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು ಮತ್ತು ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘದವರಿಗೆ ಅಭಿನಂದನೆಗಳನ್ನು ಸಲ್ಲಿಸಿ, ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

[ಮಾನ್ಯ ಆಯುಕ್ತರಿಂದ ಅನುಮೋದಿಸಿದೆ.]

ನಿರ್ದೇಶಕರು
(ಪ್ರೌಢ ಶಿಕ್ಷಣ)